# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:180 • ನೋಂದಣಿ ನಂ.:KARKAN27911 • ವಿಜಯನಗರ • 10.12.2023 • ಭಾನುವಾರ • ಪುಟ:04 • ಬೆಲೆ:2
Volume:01 • Issue:180 • Reg.No:KARKAN27911 • VIJAYANAGARA • 10.12.2023 • Sunday • Page:04 • Rs:2







ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


**PLACE YOUR ADVT.**
HOUSE RENT / SALE / LEASE, CHANGE OF NAME, OBITUARY, Public Notice & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com


# ಜಿಲ್ಲಾಧಿಕಾರಿ ಕಾಲಿಟ್ಟಲ್ಲೆಲ್ಲಾ ಕ್ಲೀನ್!

## ಡಿಸಿ ದಿವಾಕರ್ ಖಡಕ್ ಸೂಚನೆ । ನಿರ್ಲಕ್ಷ್ಯ ತೋರಿದ್ರೆ ಕ್ರಮ । ಬಿಡುವಿನಲ್ಲೂ ಸೈಕಲ್ ಏರಿ ನಗರ ಪ್ರದಕ್ಷಿಣೆ

**ಹಂಪಿ ಟೈಮ್ಸ್ ಹೊಸಪೇಟೆ**

ನಮ್ಮೂರಲ್ಲಿ ಹಂಗೇನಿಲ್ಲ ಜಿಲ್ಲಾಧಿಕಾರಿ ಓಡಾಡಿದ ಕಡೆ ಎಲ್ಲಾ ಸ್ವಚ್ಛವೋ ಸ್ವಚ್ಛ! ಹೌದು ಈ ಮಾತು ಸಾರ್ವಜನಿಕರಿಂದ ಕೇಳಿಬಂದದ್ದು ಹೊಸಪೇಟೆ ನಗರದಲ್ಲಿ.

ಹೌದು. ಎರಡನೇ ಶನಿವಾರದ ಸರ್ಕಾರಿ ಕಚೇರಿಗಳಿಗೆ ಬಿಡುವು. ಬಿಡುವೆಂದಾಕ್ಷಣ ಸಾಮಾನ್ಯವಾಗಿ ಅಧಿಕಾರಿಗಳು ಎದ್ದೇಳುವುದು ಸೋರ್ಯೋದಯದ ನಂತರವೇ!. ಆದರೆ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಬಿಡುವಿನ ಸಮಯವಿದ್ದರೂ ಶನಿವಾರ ಬೆಳಗ್ಗೆ ಸೈಕಲ್ ಏರಿ ಹೊಸಪೇಟೆ ನಗರ ಪ್ರದಕ್ಷಣೆ ಮಾಡಿದರು. ನಗರ ಪ್ರದಕ್ಷಿಣೆ ಹಾಕಿದ ಕೆಲವೇ ನಿಮಿಷಗಳಲ್ಲಿ ಜವಾಬ್ದಾರಿಯನ್ನೆ ಮರೆತಿದ್ದ ಕೆಲ ಅಧಿಕಾರಿಗಳು ಬಸ್ ನಿಲ್ದಾಣ ಸೇರಿದಂತೆ ಕೆಲ ಸ್ಥಳಗಳನ್ನು ಸ್ವಚ್ಛಗೊಳಿಸಲು ಮುಂದಾದರು.

ನಗರದ ಸಂಡೂರು ರಸ್ತೆ, ಸಾಯಿಬಾಬಾ ದೇವಸ್ಥಾನದ ಬಳಿ ಸರ್ಕಲ್, ಎಪಿಎಂಸಿ ರಸ್ತೆ, ಬಸವೇಶ್ವರ ವೃತ್ತ, ವಿಜಯನಗರ ಕಾಲೇಜ್, ಅಂಬೇಡ್ಕರ್ ಸರ್ಕಲ್, ಸರ್ಕಾರಿ ಬಸ್ ನಿಲ್ದಾಣ, 8ನೇ ವಾರ್ಡ್ ಮತ್ತು ಇಂದಿರಾನಗರ ಇನ್ನು ಕೆಲವು ಪ್ರದೇಶಗಳಲ್ಲಿ ನಗರಸಭೆಯಿಂದ ನಡೆಯುತ್ತಿರುವ ಸ್ವಚ್ಛತಾ ಕಾರ್ಯ, ಕಸ ವಿಲೇವಾರಿ, ಒಳಚರಂಡಿ, ಕುಡಿಯುವ ನೀರಿನ ಲಭ್ಯತೆ, ಬೀದಿ ನಾಯಿಗಳ ಕಾಟ, ಒತ್ತುವರಿ, ಸಮುದಾಯ ಶೌಚಾಲಯಗಳ ಸ್ವಚ್ಛತೆ, ಕೇಂದ್ರ ಬಸ್ ನಿಲ್ದಾಣದಲ್ಲಿರುವ ಶೌಚಾಲಯದ ದುಸ್ಥಿತಿ ಕಣ್ಣಿಗೆ ರಾಚಿದವು. ಮತ್ತು ಇತರೆ ಮೂಲಭೂತ ಸೌಕರ್ಯಗಳ ಬಗ್ಗೆ ನಾಗರಿಕರಿಂದ ಮಾಹಿತಿ ಪಡೆದರು.

ಜಿಲ್ಲಾಧಿಕಾರಿ ಜತೆ ನಗರಸಭೆ ಅಧಿಕಾರಿಗಳು ಸೈಕಲ್ ತುಳಿದರು. ಎಲ್ಲೆಲ್ಲಿ ಸ್ವಚ್ಛತೆ ಮಾಯವಾಗಿತ್ತೋ ಅಲ್ಲಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಸ್ವಚ್ಛತೆಗೆ ಮೊದಲ ಅದ್ಯತೆ ನೀಡಬೇಕು. ಸ್ವಚ್ಛತೆ ಇಲ್ಲದಿರುವ ಬಗ್ಗೆ ದೂರುಗಳು, ಲೋಪದೋಷ ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಇದೇ ಸಂದರ್ಭದಲ್ಲಿ ಖಡಕ್ ಸೂಚನೆ ನೀಡಿದರು. ನಗರದ ಶ್ಯಾನಭೋಗ ಫಾಸ್ಟ್‌ಫುಡ್ ನಲ್ಲಿ ಸಾಮಾನ್ಯ ಜನರಂತೆ ಉಪಹಾರ ಸೇವಿಸಿದರು. ಜಿಲ್ಲಾಧಿಕಾರಿಗಳ ಈ ನಡೆಗೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜತೆಗೆ ಅನಂತಶಯನಗುಡಿ ರೈಲ್ವೆ ಮೇಲ್ಸೇತುವೆ ಕಾರ್ಯ ಬೇಗ ಪೂರ್ಣಗೊಳಿಸಿ. ನೆನೆಗುದಿಗೆ ಬಿದ್ದಿರುವ ನಗರದ ವಾಸವಿ ಕಲ್ಯಾಣ ಮಂಪಟ ಬಳಿ ಹಂಪಿ ಮುಖ್ಯರಸ್ತೆ ದುರಸ್ಥಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯಿಂದ ಕನಕದಾಸ ವೃತ್ತದ ಮುಖ್ಯ ರಸ್ತೆವರೆಗೆ ದುರಸ್ಥಿಗೊಳ್ಳದ ರಸ್ತೆ ಕಾಮಗಾರಿಗಳನ್ನು ಬೇಗನೆ ಪೂರ್ಣಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಜನ ಒತ್ತಾಯಿಸಿದ್ದಾರೆ.















ಹೊಸಪೇಟೆ ವಿವಿಧ ಪ್ರದೇಶಗಳಿಗೆ ನಾನು ಭೇಟಿ ನೀಡಿದ ತಕ್ಷಣವೆ ಸಂಬಂಧಿಸಿದ ಅಧಿಕಾರಿಗಳು, ಸಿಬ್ಬಂದಿ ಸ್ವಚ್ಛತಾ ಕಾರ್ಯಗೈಗೊಂಡರೆ ಸಾಲದು. ತಮ್ಮ ಕರ್ತವ್ಯವನ್ನು ಮರೆಯದೆ ನಿರಂತರವಾಗಿ ಸ್ವಚ್ಛತೆ ಕಾಯ್ದುಕೊಳ್ಳಬೇಕು. ಜನರ ಸಮಸ್ಯೆಯನ್ನು ನೇರವಾಗಿ ಆಲಿಸಿದ್ದೇನೆ. ಸ್ವಚ್ಛತೆ ನಿರ್ಲಕ್ಷ್ಯಸಿದರೆ ಆರೋಗ್ಯವನ್ನು ನಿರ್ಲಕ್ಷಿಸಿದಂತೆ. ಅಧಿಕಾರಿಗಳು ಹೆದರಿ ಕೆಲಸ ಮಾಡುವುದಕ್ಕಿಂತ ಹೆಮ್ಮೆಯಿಂದ ಕೆಲಸ ಮಾಡಬೇಕು.

– ಎಂ.ಎಸ್.ದಿವಾಕರ.
ಜಿಲ್ಲಾಧಿಕಾರಿ

## ಮೈಕ್ರೋ ನ್ಯೂಸ್

### ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ಹನಸಿ ಮತ್ತು ಚಿಲಕನಹಟ್ಟಿ ವಿದ್ಯುತ್ ವಿತರಣಾ ಉಪ ಕೇಂದ್ರಗಳಲ್ಲಿ 66/11 ಕೆ.ವಿ. ನಿರ್ವಹಣಾ ಕೆಲಸ ಇರುವುದರಿಂದ ಇಂದು ಡಿ.10ರಂದು ಈ ಕೆಳಗೆ ಕಾಣಿಸಿದ ಗ್ರಾಮಗಳಲ್ಲಿ ಬೆಳಗ್ಗೆ 9ಗಂಟೆಯಿಂದ ಸಂಜೆ 5ಗಂಟೆಯವರೆಗೂ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವದು ಎಂದು ಜೆಸ್ಕಾಂ ಇಲಾಖೆಯ ಎಇಇ ತೇಜಾನಾಯ್ಕ್ ತಿಳಿಸಿದ್ದಾರೆ. ವಿದ್ಯುತ್ ವ್ಯತ್ಯಯ ಉಂಟಾಗುವ ಪ್ರದೇಶಗಳು ಹನಸಿ, ಕಣವಿನಾಯಕನಹಳ್ಳಿ, ಕಲ್ಲಳ್ಳಿ, ಕಲ್ಲಳ್ಳಿತಾಂಡ, ಬೆಣ್ಣಿಕಲ್ಲು, ಮಾದೂರು, ಉಪ್ಪಾರಗಟ್ಟಿ, ಪಿಲ್ಲೋಬನಹಳ್ಳಿ, ಮೆಟ್ರಿ, ಹೊಸಕೆರೆ, ನಾಣ್ಯಾಪುರ, ದಶಮಾಪುರ, ಆನೇಕಲ್ಲು, ಆನೇಕಲ್ಲು ತಾಂಡ, ಸೋಮನಕಟ್ಟಿ ತಾಂಡ, ಮಗಿಮಾವಿನಹಳ್ಳಿ, ಕಟ್ಟೆಹೊಲತಾಂಡ, ಹಲಗಾಪುರ ಮತ್ತು ಎಚ್.ಓಬಳಾಪುರ ಗ್ರಾಮಗಳು.

### ಉಚಿತ ಹೃದಯ ತಪಾಸಣಾ ಶಿಬಿರ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಹಂಪಾಪಟ್ಟಣ ಗ್ರಾಮದಲ್ಲಿ ಉಚಿತ ಹೃದಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಬುಡ್ಡಿ ಬಸವರಾಜ್ ತಿಳಿಸಿದರು.

ಪಟ್ಟಣದಲ್ಲಿ ಅವರು ಮಾತನಾಡಿ, ಕಾರ್ಯನಿರತ ಪತ್ರಕರ್ತರ ಸಂಘದ ಸಂಯುಕ್ತಶ್ರಯದಲ್ಲಿ ನೆರಳು ಪತ್ರಿಕೆಯ 27 ನೇ ವಾರ್ಷಿಕೋತ್ಸವದ ಅಂಗವಾಗಿ ಎಸ್.ಎಸ್.ನಾರಾಯಣ ಹೃದಯಾಲಯ ದಾವಣಗೆರೆ ಹಾಗೂ ಶಿಕ್ಷಣ ಇಲಾಖೆಯ ಸಹಕಾರದಿಂದ ಇದೇ ಡಿ.15ರ ಶುಕ್ರವಾರದಂದು ಉಚಿತ ಹೃದಯ ತಪಾಸಣಾ ಶಿಬಿರ ತಾಲೂಕಿನ ಹಂಪಾಪಟ್ಟಣ ಗ್ರಾಮದ ಸ.ಮಾ.ಹಿ ಪ್ರಾ. ಶಾಲೆಯ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದರು.

ಎದೆನೋವು, ಉಸಿರಾಟ ತೊಂದ–ರೆ, ಆನಿಯಮಿತವಾದ ಹೃದಯ ಬಡಿತ, ಭುಜನೋವು, ತಲೆ ಸುತ್ತುವುದು, ಬೆವರು ಬರುವುದು, ವಾಕರಿಕೆ ಇನ್ನೂ ಮುಂತಾದ ಲಕ್ಷಣಗಳು ಇರುವವರಿಗೆ ಇಸಿಜಿ, 2ಡಿ ಇಕೋ, ವೈದ್ಯರೊಂದಿಗೆ ಸಮಾಲೋಚನೆಯಂತಹ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.

# ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸಲಿ

## ನಂದಿಪುರಕ್ಕೆ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಭೇಟಿ । ಸರ್ಕಾರಕ್ಕೆ ಒತ್ತಾಯ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ನಂದಿಪುರ ಪುಣ್ಯಕ್ಷೇತ್ರಕ್ಕೆ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಶುಕ್ರವಾರ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ಆಲಿಸಿ ನೀರಾವರಿ ಸೌಲಭ್ಯಕ್ಕಾಗಿ ಒತ್ತಾಯಿಸಿದರು. ಪುಣ್ಯಕ್ಷೇತ್ರ ನಂದಿಪುರದ ಆಶ್ರಮದಲ್ಲಿ ಮಠಾದೀಶರ ಧರ್ಮ ಪರಿಷತ್ತು ಆಯೋಜಿಸಿದ್ದ ನೀರಾವರಿಯ ಚಿಂತನ ಸಭೆಯಲ್ಲಿ ಮಾತನಾಡಿದರು. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಹೆಚ್ಚು ಕೃಷಿ ಭೂಮಿ ಇದ್ದು ನೀರಾವರಿ ಸೌಲಭ್ಯದಿಂದ ವಂಚಿತವಾಗ್ತಿದೆ. ಹತ್ತಿರದಲ್ಲೇ ತುಂಗಾಭದ್ರಾ ನದಿಯ ನೀರಿದ್ದರು ತಾಲೂಕಿನ ರೈತರಿಗೆ ಉಪಯೋಗವಾಗುತ್ತಿಲ್ಲ. ಸರ್ಕಾರ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು. ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿ ಹೂಳೆತ್ತುವ ಕಾರ್ಯ >>4

# ಇಂದು ರಾಜ್ಯಮಟ್ಟದ ಸೆಮಿ–ಫೈನಲ್ ಬಾಲ್ ಬ್ಯಾಡ್ಮಿಂಟನ್‌ಗೆ ತಲಾ 4 ತಂಡಗಳು

ಬಾಲಕಿಯರು: ಮೈಸೂರು, ಉಡುಪಿ, ಹಾಸನ, ಉತ್ತರ ಕನ್ನಡ । ಬಾಲಕರು: ಕೊಪ್ಪಳ, ಬಾಗಲಕೋಟೆ, ದಕ್ಷಿಣ ಕನ್ನಡ, ಚಿಕ್ಕಮಗಳೂರು





**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಡಾ.ಪುನೀತ್ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ಜರುಗಿದ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಮೊದಲ ದಿನದ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬಾಲಕಿಯರ ವಿಭಾಗದಲ್ಲಿ ಮೈಸೂರು, ಉಡುಪಿ, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ತಂಡಗಳು ಸೆಮಿ ಫೈನಲ್‌ಗೆ ಅರ್ಹತೆ ಪಡೆದಿವೆ. ಬಾಲಕರ ವಿಭಾಗದಲ್ಲಿ ಕೊಪ್ಪಳ, ಬಾಗಲಕೋಟೆ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳು ಸೆಮಿ ಫೈನಲ್ ಪ್ರವೇಶಿಸಿವೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಫಾಲಾಕ್ಷ.ಟಿ. ತಿಳಿಸಿದರು.

ಹೊಸಪೇಟೆ ನಗರದಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರಾಜ್ಯದಲ್ಲಿಯೇ ಮೊದಲ ಬಾರಿಗೆ ಏಕ ಕಾಲಕ್ಕೆ ಆರು ಅಂಕಣಗಳಲ್ಲಿ ಪಂದ್ಯಾವಳಿಗಳನ್ನು ನಡೆಸಲಾಗುತ್ತಿದೆ ಎಂದರು.

ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಜಿ.ವಿದ್ಯಾಧರ ಮಾತನಾಡಿ, ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಂದ 33 ಬಾಲಕರ ಹಾಗೂ 33 ಬಾಲಕಿಯರ ತಂಡಗಳಲ್ಲಿ 660ಕ್ಕೂ ಹೆಚ್ಚು ಕ್ರೀಡಾ ಪಟುಗಳು ಭಾಗವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಭಾನುವಾರ ಸೆಮಿಫೈನಲ್, ಫೈನಲ್ ನಡೆಯಲಿವೆ ಎಂದರು.




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಪೋಷಕರು ಹೇಳಿಕೊಡಬೇಕಿದೆ ಕಂದಮ್ಮಗಳಿಗೆ ಸೂಕ್ಷ್ಮ ತಿಳಿವಳಿಕೆ



ನಾಗರಿಕ ಸಮಾಜದ ತಲೆಗ್ಗಿಸುವಂಥ ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯದಂಥ ಘಟನೆಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಅದರಲ್ಲೂ ಕಂದಮ್ಮಗಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಮನಕುಲುಕುವಂತೆ ಮಾಡುತ್ತದೆ. ಪಾಪ, ಆ ಕಂದಮ್ಮಗಳಿಗೆ ಅದು ಲೈಂಗಿಕ ದೌರ್ಜನ್ಯ ಎಂದೇ ಗೊತ್ತಿರುವುದಿಲ್ಲ. ಅವು ಆಘಾತಕ್ಕೆ ಒಳಗಾಗಿ, ಮಾನಸಿಕವಾಗಿ ಕುಗ್ಗಿಹೋಗುತ್ತವೆ. ಇಂಥ ದೌರ್ಜನ್ಯಗಳು ಹೊರಗಿನವರಿಂದಲೂ ನಡೆಯುತ್ತವೆ ಮತ್ತು ನಮ್ಮೊಟ್ಟಿಗೆ ಇರುವ ನೆರೆಹೊರೆಯವರು, ನಮ್ಮ ಸಂಬಂಧಿಗಳು.. ಅಷ್ಟೇ ಏಕೆ, ನಮ್ಮ ಮನೆಯ ಸದಸ್ಯರಿಂದಲೇ ನಡೆಯಬಹುದು ಮತ್ತು ನಡೆದಿರುವುದಕ್ಕೆ ಸಾಕಷ್ಟು ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಶಾಲೆಗೆ ಹೋಗುವ ಕಂದಮ್ಮಗಳಿಗೆ ಇದಾವುದರ ಪರಿವೇ ಇರುವುದಿಲ್ಲ ಮತ್ತು ತಿಳಿದಿಕೊಳ್ಳುವ ವಯಸ್ಸು ಅವರದು ಇರುವುದಿಲ್ಲ. ಮೊಗ್ಗಿನ ಹೂವಿನಂತೆ ಅವರ ಮನಸು ಇರುತ್ತದೆ. ಪೋಷಕರಾದವರು ಕೇವಲ ತಮ್ಮ ಕಂದಮ್ಮಗಳನ್ನು ಬರೀ ಶಾಲೆಗೆ ಕಳಿಸುವುದು, ಅವರು ಒಂದೆರಡು ಅಕ್ಷರ ಕಳಿಸಿದರೆ ಅದನ್ನೇ ನೋಡಿ ಸಂತಸ ಪಡುವುದು, ಹೊರಗಡೆ ಆಟವಾಡಲು ಕಳಿಸುವುದು, ಮನೆಯಲ್ಲಿ ಪ್ರೀತಿಯಿಂದ ಊಟ ಮಾಡಿಸುವುದು ಅಷ್ಟನ್ನೇ ಮಾಡುತ್ತಿದ್ದಾರೆ. ಆದರೆ, ಮಕ್ಕಳಿಗೆ ಇವೆಲ್ಲವುದರ ಜತೆ ಸೂಕ್ಷ್ಮ ವಿಚಾರಗಳನ್ನೂ ಪೋಷಕರು ಅವರಿಗೆ ಹೇಳಿಕೊಡಬೇಕು ಅಂತ ಅನಿಸಿಲ್ಲವೆಂಬುದು ದುರಂತ. ಇತ್ತೀಚೆಗೆ ತೆಲುಗಿನ ಎರಡು ಸಿನಿಮಾಗಳು ಈ ಬಗ್ಗೆ ಗಮನ ಸೆಳೆದಿದ್ದು ಸಮಾಧಾನಕರ. ನಂದಮೂರಿ ಬಾಲಕೃಷ್ಣ ಅಭಿನಯದ ಭಗವಂತ ಕೇಸರಿ ಸಿನಿಮಾದಲ್ಲಿ ನಾಯಕ ಒಮ್ಮೆ ದೌರ್ಜನ್ಯಕ್ಕೊಳಗಾದ ವಿದ್ಯಾರ್ಥಿನಿಯ ಸ್ಕೂಲಿಗೆ ಭೇಟಿನೀಡುತ್ತಾನೆ.ಆಗನಡೆಯುತ್ತಿದ್ದಕಾರ್ಯಕ್ರಮವೊಂದರಲ್ಲಿ ಮಾತನಾಡುವ ನಾಯಕನ ಮಾತುಗಳು ಅಲ್ಲಿದ್ದ ಪೋಷಕರು ಮತ್ತು ಮಕ್ಕಳಲ್ಲಿ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸುತ್ತದೆ. ಆತ ತನ್ನ ಭಾಷಣದಲ್ಲಿ ಏನು ಹೇಳುತ್ತಾನೆಂದರೆ 'ಮಕ್ಕಳೇ, ನಿಮ್ಮ ತಾಯಿಯನ್ನು ಹೊರತುಪಡಿಸಿ ಯಾರಾದರೂ ನಿಮ್ಮ ಎದೆಭಾಗವನ್ನು ಮುಟ್ಟಿದರೆ, ದೇಹದ ಎರಡು ತೊಡಗಳ ನಡುವೆ ಮತ್ತು ಹಿಂಭಾಗವನ್ನು ಮುಟ್ಟಿದರೆ ತಕ್ಷಣವೇ ನಿಮ್ಮ ತಾಯಿಗೆ ತಿಳಿಸಿಬಿಡಿ. ಶಿಕ್ಷಕರಾದವರೂ ಸಹ ಮಕ್ಕಳಿಗೆ ಇದನ್ನು ತಿಳಿಸಿ ಜಾಗೃತಿ ಮೂಡಿಸಬೇಕು' ಎನ್ನುತ್ತಾನೆ. ಅಕ್ಷರಶಃ ಇದು ಹೇಳಿಕೊಡಬೇಕಾದ ವಿಚಾರ. ನಟ ಸಿದ್ಧಾರ್ಥ ನಟಿಸಿದ 'ಚಿಕ್ಕೂ' ಹೆಸರಿನ ಸಿನಿಮಾ ಇತ್ತೀಚೆಗೆ ಬಂದಿತ್ತು. ಅದರಲ್ಲೂ ಎಂಟು ವರ್ಷದ ಕಂದಮ್ಮಗೆ ಆಕೆಯ ತಾಯಿ ಏನು ಹೇಳುತ್ತಾಳೆಂದರೆ 'ಕಂದಾ, ನಿನ್ನ ಕೈಗಳನ್ನು ಹೊರತುಪಡಿಸಿ ಬೇರೆ ಜಾಗದಲ್ಲಿ ಯಾರಾದರೈ ಮುಟ್ಟಿದರೆ, ಸವರಿದರೆ ನನ್ನ ಗಮನಕ್ಕೆ ತರಬೇಕು' ಎನ್ನುತ್ತಾಳೆ. ಇದು ಸಿನಿಮಾದ ದೃಶ್ಯಕ್ಕಷ್ಟೇ ಸೀಮಿತವಾಗಬಾರದು. ಪ್ರತಿ ಮನೆಯಲ್ಲಿ ಪ್ರತಿ ತಾಯಿ ತನ್ನ ಮಗುವಿಗೆ ಸೂಕ್ಷ್ಮ ಸಂಗತಿಗಳನ್ನು ಹೇಳಿಕೊಡಬೇಕು. ಅವೆಲ್ಲ ಅವರಿಗೆ ಅರ್ಥವಾಗುವುದಿಲ್ಲ. ಆದರೂ, ಗುಪ್ತಾಂಗಗಳನ್ನು ಯಾರಾದರೂ ಮುಟ್ಟಿದರೆ ಕಿರುಚಬೇಕು, ಇನ್ನೊಬ್ಬರ ಸಹಾಯ ಪಡೆಯಬೇಕು, ಮನೆಯಲ್ಲಿ ತನ್ನ ತಾಯಿಗೆ ಹೇಳಬೇಕು ಎಂದು ಕಂದಮ್ಮಗಳಿಗೆ ಮನದಟ್ಟು ಮಾಡಬೇಕು. ಅಷ್ಟರ ಮಟ್ಟಿನ ಜಾಗೃತಿ ಕಂದಮ್ಮಗಳಲ್ಲಿ ಮೂಡಿಸುವ ಪ್ರಯತ್ನ ನಾವೆಲ್ಲರೂ ಮಾಡಬೇಕು. ಈ ಮೂಲಕ ಕಂದಮ್ಮಗಳನ್ನು ರಕ್ಷಿಸಬೇಕಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# ಎಚ್ಚರಿಕೆ, ಮನೆಯಲ್ಲಿ ಮಗುವಿದೆ!
# ಮಾತಿನ ಮೇಲಿನ ಹಿಡಿತ ತಪ್ಪದಿರಲಿ



ಮಾತೆಂಬುದು ಜ್ಯೋತಿರ್ಲಿಂಗ" ಎಂಬ ಅಲ್ಲಮ ಪ್ರಭುಗಳ ಮಾತು, ಮಾತಿನ ವೈಶಿಷ್ಟ್ಯವನ್ನು ಸಾರಿ ಹೇಳುತ್ತದೆ. ಒಮ್ಮೆ ನಮ್ಮ ಬಾಯಿಂದ ತಪ್ಪಾದ ಮಾತು ಹೊರ ಬಂದರೆ, ನಂತರ ನೀವು ಎಷ್ಟು ಬಾರಿ ಕ್ಷಮೆ ಕೇಳಿದರೂ ಅದರ ಪರಿಣಾಮದ ಪ್ರಭಾವವನ್ನು ಸರಿಪಡಿಸುವುದು ಕಷ್ಟ ಎನ್ನುವ ಶರಣರ ವಚನಗಳು ಒಂದು ಕಡೆಯಾದರೆ. ಮುತ್ತಿನಂತ ಮಾತಾಡಿದೆ ನೋಡು, ಆಹಾ ಎಂತಹ ಮಾತು-ಮಾತು ಅಂದರೆ ಮಾತು, ಹಾಗೆಯೆ ಮಾತನಾಡುವ ಮೊದಲು ಏನು ಮಾತನಾಡುತ್ತಿದ್ದೇನೆ ಎನ್ನುವ ಪ್ರಜ್ಞೆ ಇರಬೇಕು! ಹೀಗೆ ಸಾಮಾನ್ಯ ಜನರ ಆಡುವಂತಹ ಮಾತುಗಳನ್ನು ನಮ್ಮ ನಿತ್ಯ ಜೀವನದಲ್ಲಿ ನಾವು ನೀವು ಒಂದಿಲ್ಲೊಂದು ಕಡೆಯಲ್ಲಿ ಕೇಳಿಯೆ ಇರುತ್ತೇವೆ ಅಲ್ಲವೆ? ಇವೆಲ್ಲವೂ ನಮಗೆ ಮಾತಿನ ಮಹತ್ವವನ್ನು ತಿಳಿಸುತ್ತವೆ, ಏಕೆಂದರೆ ಮಾತು ಹಾಗೆ ಈ ಮಾತು ಮುತ್ತು ಇದ್ದ ಹಾಗೆ ಒಂದು ವೇಳೆ ತಪ್ಪಿ ಮಾತನಾಡಿದರೆ ಇದೇ ನಮಗೆ ಆಪತ್ತು! ಇನ್ನು ಸ್ವಲ್ಪ ನಮ್ಮ ಬದಿಯ ಜನರು ಹೇಳೋದು ಬೇರೇನೆ ಇರುತ್ತೆ ನೋಡಿ "ಮಾತು ಆಡಿದರೆ ಹೊಯಿತು ಮುತ್ತು ಒಡೆದರೆ/ಕಳೆದರೆ ಹೊಯಿತು" ಮಾತಿನಿಂದಲೇ ನಗೆ ಈ ಮಾತಿನಿಂದಲೇ ಹಗೆ ಎಂಬೆಲ್ಲ ವರಸೆಗಳನ್ನು ಕಾಣಬಹುದು. ಈ ಎಲ್ಲಾ ಶರಣರ ವಚನಗಳು, ಗಾದೆಗಳು, ಆಡುನುಡಿಗಳು ನಮಗೆ ಮಾತಿನ ಬಗ್ಗೆ ಅದರ ತೀವ್ರತೆಯ ಪ್ರಮಾಣದ ಮತ್ತು ಪರಿಣಾಮದ ಅಂದಾಜನ್ನು ಅವರವರ ಮಾತಿನಲ್ಲೆ ಕಟ್ಟಿಕೊಡುವುದನ್ನು ಕಾಣಬಹುದಾಗಿದೆ.

**ಉದಾ:-** ಹಲ್ಲು ಬಿಗಿ ಹಿಡಿದು ಮಾತಾಡು, ಇಲ್ಲಾಂದ್ರ ಒಂದೊಂದು ಹಲ್ಲುಗಳನ್ನು ಉದುರಿಸಿ ಬಿಡುತ್ತೇನೆ, ನೀ ಏನು ಮಾತಾಡಕತ್ತಿದ್ದೀ ಅಂತ ಕಬರು ಐತೇನು ನಿನಗ? ನೆಟ್ಟಗ ಮಾತಾಡು ಮ....ನಾ/ಳಾ ಹಲ್ಲು ಕಿತ್ತು ಕೈಯಾಗ ಕೊಟ್ಟೇನು!

ಇಂತಹ ಜನಸಾಮಾನ್ಯರ ಮಾತಿನಿಂದಲೇ ನಮಗೆಲ್ಲ ತಪ್ಪು ಮಾತಿನ ಪರಿಣಾಮ ಏನಾದೀತು ಎನ್ನುವುದು ಎಂಬುದರ ಒಂದು ಸ್ಪಷ್ಟ ಕಲ್ಪನೆ ಗುತ್ತಾಗಿಬಿಡುತ್ತದೆ. ಇನ್ನು ಸ್ವಲ್ಪ ಸಭ್ಯ ಸೌಮ್ಯ ಭಾಷೆಯಲ್ಲಿ ಮಾತಿನ ಮಹತ್ವವನ್ನು ನಾವೆಲ್ಲ ಕೇಳಿದ್ದೇವೆ " ಮಾತಿನಿಂದ ನಗೆ ಮಾತಿನಿಂದ ಹಗೆ, ಈ ಜಗತ್ತಿನಲ್ಲಿ ಮಾತೇ ಮಾಣಿಕ್ಯ" ಎನ್ನುವುದನ್ನು ತಿಳಿಹೇಳಿದ್ದಾರೆ ಇನ್ನು ನಮ್ಮ ಶರಣರಾದಿಯಾಗಿ ಮಾತು ಹೇಗಿರಬೇಕು ಎನ್ನುವುದನ್ನು ಅವರ ಸುಂದರ ವಚನಗಳಲ್ಲಿ " ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಹೌದು" ಎನ್ನುವಂತಿರಬೇಕು ಎಂದೆಲ್ಲ ಹೇಳಿರುವುದನ್ನು ಕಂಡರೆ ನಮಗೆಲ್ಲ ಮಾತಿನ ಮಹತ್ವ ಗೊತ್ತಾಗುತ್ತದೆ.

ಈ ಎಲ್ಲ ಅಂಶಗಳು ಅದನ್ನೇ ಹೇಳುತ್ತವೆ ಅದೇ ನಮ್ಮ ಮಾತು ಹೇಗಿರಬೇಕು ಮತ್ತು ಇಲ್ಲದಿದ್ದರೆ ಏನಾದೀತು ಎನ್ನುವುದನ್ನು ಅಲ್ಲವೆ? ಇನ್ನು ನಮ್ಮನ್ನೇ ಸಕಲ ಸದ್ಗುಣಸಂಪನ್ನರು ಎಂದು ಕೊಂಡಿರುವ ನಮ್ಮನ್ನೇ ಸದಾ ಅನುಕರಿಸುವ, ಹಂಬಲಿಸುವ ನಮ್ಮ ಮಕ್ಕಳ ಮುಂದೆ ಒಂದು ವೇಳೆ ಪಾಲಕರಾದ ನಾವು ಸರಿಯಾಗಿ ಮಾತನಾಡದಿದ್ದರೆ? ಏನಾದೀತು ಎನ್ನುವುದನ್ನು ಒಮ್ಮೆ ಜವಾಬ್ದಾರಿಯಿಂದ ಗಮನಿಸಿದರೆ ಮಾತಿನ ಮಹತ್ವ ಪಕ್ಕಾದೀತು ಅಲ್ಲವೆ.

ಹೀಗೆ ಒಂದು ಸಣ್ಣ ಕಥೆ ನೆನಪಾಗುತ್ತದೆ ನಮಗೆ ಹೇಳಿದ್ದು ಒಂದು ಕಾಡಿನಲ್ಲಿ ಎರಡು ಗಿಳಿಗಳಿದ್ದವು, ಎರಡೂ ಒಡಹುಟ್ಟಿದ ಸಹೋದರರಾಗಿದ್ದವು. ಒಮ್ಮೆ ಬಾರಿ ಮಳೆ ಗಾಳಿಯಿಂದ ಇವುಗಳ ಮನೆ ಹಾಳಾಗಿ, ಎರಡು ಗಿಳಿಗಳು ದಾರಿಯಲ್ಲಿ ಬಿದ್ದಿದ್ದವು. ಇವುಗಳನ್ನು ಕಂಡ ಒಬ್ಬ ಸಾಧು ಇದರಲ್ಲಿ ಒಂದು ಗಿಳಿಯ ಮರಿಯನ್ನು ತನ್ನ ಜೊತೆ ತನ್ನ ಆಶ್ರಮದಲ್ಲಿ ಸಾಕಿದ, ಇನ್ನೊಂದು ಗಿಳಿಯ ಮರಿಯನ್ನು ಅಲ್ಲಿಯೇ ಕಾಡಿನಲ್ಲಿ ಅವಿತಿದ್ದ ಓರ್ವ ಢಕಾಯಿತ ತನ್ನಲ್ಲಿ ಸಾಕಿಕೊಂಡ.

ಮುಂದೆ ಯಾರೇ ಈ ಕಾಡಿನ ದಾರಿಯಲ್ಲಿ ಸಂಚರಿಸಿದರು ಮೊದಲ ಢಕಾಯಿತನ ಬಳಿ ಇದ್ದ ಗಿಳಿ ಸಂಚಾರಿಗಳನ್ನು ಕಂಡ ತಕ್ಷಣ ಇವರನ್ನು ಹಿಡಿಯಿರಿ, ಬಡಿಯಿರಿ, ಇವರಲ್ಲಿ ಇರುವುದೆಲ್ಲವನ್ನು ಕಿತ್ತುಕೊಳ್ಳಿ ಎಂದು ಕೂಗುತಿತ್ತು. ಹಾಗೆಯೇ ಮುಂದೆ ಸಾಗುವಾಗ, ಆ ಸಾಧುವಿನ ಕುಠೀರದ ಮುಂದಿನ ಮರದಲ್ಲಿ ಕುಳಿತ ಗಿಳಿ, ಯಾರಾದರು ದಾರಿಹೊಕರು ಕಂಡ ತಕ್ಷಣ ಇವರನ್ನು ಬರಮಾಡಿಕೊಳ್ಳಿ, ಕುಳ್ಳರಿಸಿ ಅವರಿಗೆ ಆಯಾಸವಾಗಿರಬಹುದು, ಕುಡಿಯಲು ಏನನ್ನಾದರು ನೀಡಿ ಎಂದೆಲ್ಲ ಹೇಳುವುದನ್ನು ಕೇಳುತಿದ್ದ ದಾರಿಹೊಕರಲ್ಲಿ ಆಶ್ಚರ್ಯವಾಗುತಿತ್ತು!

ಇದೇಕೆ ಎಂದು ಕೇಳಿದಾಗ ಪ್ರತಿನಿತ್ಯ ಆ ಗಿಳಿಗಳು ಏನನ್ನು ನೋಡುತಿದ್ದವು ಮತ್ತು ಏನನ್ನು ಕೇಳುತಿದ್ದವು ಮತ್ತು ಯಾರ ಬಳಿ ಇರುತಿದ್ದವು ಅದನ್ನೆ ಸೂಕ್ಷ್ಮವಾಗಿ ಗಮನಿಸಿ ಅದನ್ನೇ ಅವುಗಳೂ ರೂಡಿಸಿಕೊಂಡಿದ್ದವು ಎನ್ನುವ ಸತ್ಯವನ್ನ ಅರಿತ ಜನ ತಮ್ಮ ನಡವಳಿಕೆಗಳು ಹೇಗಿರಬೇಕು ಎಂದು ತಿಳಿದುಕೊಳ್ಳುತ್ತಿದ್ದರು. ಇದೊಂದು ಸಾಂದಾರ್ಭಿಕ ಕಥೆ ಅನ್ನಿ, ಆದರೆ ಇದರಿಂದ ನಮ್ಮ ನಡೆ ನುಡಿ ಹೇಗೆ ನಮಗೆ ಅರಿವಿಲ್ಲದಂತೆ ನಮ್ಮನ್ನು ಅನುಕರಿಸುತ್ತಿರುವ ನಮ್ಮ ಜೊತೆಯಲ್ಲಿ ಇರುವವರ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರುತ್ತವೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗುತ್ತದೆ ಅಲ್ವೆ? ಹಾಗೆ ಎಲ್ಲಾ ಗೊತ್ತಿದ್ದ ನಾವು ಏನು ಮಾಡುತಿದ್ದೇವೆ? ನಮ್ಮ ಮನೆಯಲ್ಲಿ ನಮ್ಮ ಮಕ್ಕಳ ಮುಂದೆ ನಮ್ಮ ಮನೆಯವರ ಜೊತೆ ನಮ್ಮ ಮಾತಿನ ಓಘ, ದಾಟಿ, ಶೈಲಿ ಅಂತಾರಲ್ಲ ಅದು ಹೇಗಿದೆ ಒಮ್ಮೆ ಯೋಚಿಸಿ? ಅದೇ ನಾವು ಮಾಡುತ್ತಿರುವ ತಪ್ಪು ಅಬ್ಯಾಸ, ಅದನ್ನೆ ನಾವು ಸರಿ ಮಾಡಿಕೊಳ್ಳಬೇಕಾಗಿದೆ. ಇದರಲ್ಲಿ ಏನು ವಿಶೇಷ ಅನ್ನುವವರಿಗೆ ಕೆಲ ಪ್ರಶ್ನೆಗಳು ನಿಮ್ಮಷ್ಟಕ್ಕೆ ನೀವೆ ಉತ್ತರ ಹೇಳಿಕೊಳ್ಳಿ.



ಜಿ. ಶಿವಕುಮಾರ್ ಸೋಗಿ,
ಕಾರವಾರ, ಕೈಗಾ.

1-ಎಷ್ಟು ಜನ ಪಾಲಕರು ನಿಮ್ಮ ಮಕ್ಕಳಿಗೆ ಮುಂಜಾನೆ ಎದ್ದ ತಕ್ಷಣ ಅವರ ತಲೆಯನ್ನು ಸವರಿ ಕೆನ್ನೆಗೆ ಒಂದು ಮುತ್ತು ಕೊಟ್ಟು, ಗುಡ್ ಮಾರ್ನಿಂಗ್ ಪಾಪು, ಶುಭಮುಂಜಾನೆ ಅನ್ನುತ್ತೀರಿ?

2-ಎಷ್ಟು ಜನ ಪಾಲಕರು ನಿಮ್ಮ ಮಕ್ಕಳ ಎದುರಿಗೆ ನಿಮ್ಮ ತಂದೆ-ತಾಯಿಗೆ ಮುಂಜಾನೆ ಎದ್ದ ತಕ್ಷಣ ಅವರ ಕಾಲಿಗೆ ನಮಸ್ಕರಿಸಿ ಗುಡ್ ಮಾರ್ನಿಂಗ್ ಪಾ../ಮಾ... ಎನ್ನುತ್ತೀರಿ?

3-ಎಷ್ಟು ಜನ ಪಾಲಕರು ನಿಮ್ಮ ಮಕ್ಕಳ ಎದುರಿಗೆ ಇದ್ದಾಗ ನಿಮ್ಮ ಸ್ನೇಹಿತರಿಗೆ ಕರೆ ಮಾಡಿ ಮಾತನಾಡುತ್ತೀರಿ?(ಸ್ನೇಹಿತರ ಜೊತೆಗಿನ ಸಂಭಾಷಣೆಯ ಶೈಲಿಯನ್ನು ನಾನು ಇಲ್ಲಿ ಬಿಡಿಸಿ ಹೇಳುವ ಅಗತ್ಯತೆ ಇಲ್ಲ ಎಂದುಕೊಳ್ಳುತ್ತೇನೆ).

4-ಎಷ್ಟು ಜನ ಪಾಲಕರು ನಿಮ್ಮ ಮಕ್ಕಳ ಎದುರಿಗೆ ನಿಮ್ಮ ಸ್ನೇಹಿತರ ಮಕ್ಕಳನ್ನು ಅವರ ಸಾಧನೆಯನ್ನು ಹೊಗಳುತ್ತೀರಿ? ಮತ್ತು ನಿಮ್ಮ ಮಕ್ಕಳಿಗೆ ನಿನ್ನಿಂದ ಅದು ಯಾಕಾಗುವುದಿಲ್ಲ ಎಂದು ಇತರರ ಜೊತೆ ನಿಮ್ಮ ಮಕ್ಕಳನ್ನು ಸಣ್ಣವನಾಗಿಸುತ್ತೀರಿ?

5-ಎಷ್ಟು ಜನ ಪಾಲಕರು ನಿಮ್ಮ ಮಕ್ಕಳ ಎದುರಿಗೆ ನಿಮ್ಮ ಮನೆಯವರನ್ನ ಹೊಗಳುತ್ತೀರಿ/ತೆಗಳುತ್ತೀರಿ/ಅವರೊಂದಿಗೆ ಜೋರಾಗಿ ಕಿರುಚಾಡುತ್ತೀರಿ?

ಇಷ್ಟೆ, ಇಷ್ಟು ಸಾಕು. ನಿಮ್ಮ ಉತ್ತರ ಏನೇ ಆಗಿರಲಿ, ಕೇವಲ ನಿಮ್ಮ ಮಕ್ಕಳ ಜೊತೆಗಿನ ಹತ್ತೇ ಹತ್ತು ನಿಮಿಷದ ಸಂಭಾಷಣೆಯಲ್ಲಿ, ನಿಮ್ಮ ಉತ್ತರಗಳ ನಿಜಾಯಿತಿ ಗೊತ್ತಾಗಿಬಿಡುತ್ತದೆ. ಸಾಧ್ಯವಾದರೆ ನಿಮ್ಮ ಮಕ್ಕಳ ಭಾಷೆಯನ್ನು ಅವರು ಅವರ ಗುಂಪಿನಲ್ಲಿದ್ದಾಗ ಗಮನಿಸಿದರೆ ನಿಮಗೇ ಗೊತ್ತಾಗುತ್ತದೆ ಅಲ್ಲವೇ. ಸಾಧ್ಯವಾದರೆ ನಿಮ್ಮ ಮಕ್ಕಳ ಅರಿವೆಗೆ ಬಾರದಂತೆ ಅವರ ಅವರ ಸ್ನೇಹಿತರ ಜೊತೆಯಲ್ಲಿನ ಸಂಬಾಷಣೆಯನ್ನು ಅವರು ಬಳಸುವಂತಹ ಶಬ್ದಗಳ ಪ್ರಯೋಗಗಳನ್ನು ಒಮ್ಮೆ ಗಮನಿಸಿ ನಿಮ್ಮ ಮಕ್ಕಳು ಬೇಡವಾದ ಆ ಶಬ್ದಗಳ ಸಂಪತ್ತಿನ ಆಗರ ಅರ್ಥವಗುತ್ತದೆ ಹಾಗೆಯೆ ಆಶ್ಚರ್ಯದ ಜೊತೆ ಜೊತೆಗೆ ಅಸಹ್ಯ ವಾಗುತ್ತದೆ. ಇದಕ್ಕೆ ಕಾರಣ ಇಷ್ಟೆ.

1- ಒಂದು ಮನೆಯಲ್ಲಿನ ಪಾಲಕರ ಮಾತಿನ ಪ್ರಭಾವ, ಏಕೆಂದರೆ ಮಕ್ಕಳೆ ನಿಮಗೆ ಕನ್ನಡಿ ಇದ್ದಂತೆ ನಿಮ್ಮದೇ ಪ್ರತಿಬಿಂಬ ಅವರು ವ್ಯಕ್ತಪಡಿಸುತ್ತಿರುತ್ತಾರೆ!

2- ಸ್ನೇಹಿತರು ಮತ್ತು ಹಿರಿಯ ಸಹಪಾಠಿಗಳ ಸಹವಾಸ ಮತ್ತು ಅನುಕರಣೆ

3- ಸಮಾಜಿಕ ಮಾಧ್ಯಮಗಳು ವಿಶೇಷವಾಗಿ ದೃಕ್ ಶ್ರವಣ ಮಾಧ್ಯಮ.

ಹಾಗಾಗಿ ಪಾಲಕರಾದವರು ತಮ್ಮ ಮಕ್ಕಳು ಈ ಮೇಲಿನ ಯಾವ ಹಂತದಲ್ಲಿ ಅನಪೇಕ್ಷಿತವಾಗಿ ಅವರಿಗೆ ಅರವಿಲ್ಲದಂತೆ ಇಂತಹ ಸನ್ನಿವೇಷಗಳಿಗೆ ತೆರೆದುಕೊಳ್ಳುತ್ತಿದ್ದಾರೆ ಎನ್ನುವುದನ್ನು ಮುತುವರ್ಜಿಯಿಂದ ಗಮನಿಸಿ ಅವುಗಳಿಂದ ಮಕ್ಕಳನ್ನು ದೂರವಿಡಬೇಕು. ಸಾಧ್ಯವಾದರೆ ಪಾಲಕರೂ ಸಹ ಅನಗತ್ಯವಾಗಿ ಇವುಗಳ ಪ್ರಭಾವಕ್ಕೆ ಒಳಗಾಗುವುದನ್ನು ನಿಲ್ಲಿಸಬೇಕು. ಹಾಗಾಗಿಯೇ ಹೇಳಿದ್ದು ನಿಮ್ಮ ಮನೆಯಲ್ಲಿ ಮಕ್ಕಳಿದ್ದಾರೆ ಎಂದಾದರೆ ನಿಮ್ಮ ನಾಲಿಗೆಯ ಮೇಲೆ ನಿಮ್ಮ ಹಿಡಿತ ತಪ್ಪದಿರಲಿ ಎಂದು ಏಕೆಂದರೆ ಮನೆಯಲ್ಲಿ ಮಗುವಿದೆ! ಮಾತು ಮುತ್ತಿನಂತಿರಬೇಕಯ ತಪ್ಪಿ ಆಡಿದರೆ ಆಪತ್ತು ತಪ್ಪಿದ್ದಲ್ಲ. ಮುಂದುವರಿಯವುದು..........

## ಮಮತೆಯ ತೊಟ್ಟಿಲು ಅನಾವರಣ

**ಹಂಪಿ ಟೈಮ್ಸ್ ಕೊಪ್ಪಳ**
ನವೆಂಬರ ಮಾಹೆ ಅಂತರಾಷ್ಟ್ರೀಯ ದತ್ತು ಮಾಸಾಚರಣೆಯ – ದತ್ತು ಕಾರ್ಯಕ್ರಮದ ಪರಿಕಲ್ಪನೆಯ ಅಡಿಯಲ್ಲಿನ ನವೆಂಬರ್ 28 ರಂದು ಮಮತೆಯ ತೊಟ್ಟಿಲು ಯೋಜನೆಯ ಕುರಿತು ಜಾಗೃತಿ ನೀಡುವ ನಾಮಫಲಕವನ್ನು ಜಿಲ್ಲಾ ಆಸ್ಪತ್ರೆಯ ಸಖಿ ಒನ್ ಸ್ಟಾಪ್ ಸೆಂಟರ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ತಿಪ್ಪಣ್ಣ ಸಿರಸಗಿ ಅವರು ಅನಾವರಣಗೊಳಿಸಿದರು.

ನಂತರ ಮಾತನಾಡಿದ ಅವರು, ಮಹಿಳೆಯು ತಾಯಿಯಾಗಿ, ಮಡದಿಯಾಗಿ, ಸಹೋದರಿ ಯಾಗಿ, ಮಗಳಾಗಿ ಹೀಗೆ ನಾನಾ ರೀತಿಯಲ್ಲಿ ಗಂಡಿನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಇಂತಹ ಮಹಿಳೆಯನ್ನು ನಾವು ಗೌರವಿಸಬೇಕು. ಆದರೆ ಇಂದಿನ ವಾಸ್ತವ ಸ್ಥಿತಿ ಗಮನಿಸಿದಾಗ, ಇಷ್ಟವಿಲ್ಲದ ಬಲವಂತದ ಮದುವೆಗಳು, ಪ್ರೇಮ ವಿವಾಹಗಳಲ್ಲಿ ಕುಟುಂಬಸ್ಥರು ಮೇಲು ಕೀಳೆಂದು ಜಾತಿ ನಿಂದನೆಯಿಂದ ದಂಪತಿಗಳನ್ನು ಕಡೆಗಾಣಿಸು ವುದು, ಅನೈತಿಕ ಸಂಬಂಧ, ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಹದಿಹರೆಯದ ಅಪ್ರಾಪ್ತ ವಯಸ್ಕರ ಗರ್ಭಧಾರಣೆಯ ಪ್ರಕರಣಗಳ ಕಾರಣದಿಂದ ಹೆಣ್ಣು ಗರ್ಭಧರಿಸಿ, ನಂತರದಲ್ಲಿ ಮಗುವನ್ನು ಪೋಷಣೆ ಮಾಡಲು ಸಾಧ್ಯವಾಗದೆ ಎಲ್ಲೆಂದರಲ್ಲಿ ಎಸೆದು ಮಗುವಿನ ಪ್ರಾಣಕ್ಕೆ ಕುತ್ತು ತರುತ್ತಾರೆ. ಅದಕ್ಕೆ ಬದಲಾಗಿ ಇಲಾಖೆ ಜಾರಿ ಮಾಡಿರುವ ಮಮತೆಯ ತೊಟ್ಟಿಲಿನಲ್ಲಿ ಮಗುವನ್ನು ಹಾಕಿದರೆ ಆ ಮಗುವಿನ ಪೋಷಣೆಯ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳುತ್ತದೆ ಎಂದು ಅವರು ಹೇಳಿದರು.

ಯಾವುದೇ ಸಂಕಷ್ಟದಲ್ಲಿರುವ ಮಹಿಳೆ, ಮಕ್ಕಳು, ನಿರಾಶ್ರಿತರು ಕಂಡು ಬಂದಲ್ಲಿ ತಕ್ಷಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಯೋಜನೆಯ – ಸಖಿ ಒನ್ ಸ್ಟಾಪ್ ಸೆಂಟರ್, ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಡಬೇಕು. ಸಖಿ ಒನ್ ಸ್ಟಾಪ್ ಸೆಂಟರ್ ಘಟಕದಲ್ಲಿ ಇಂತಹ ತೊಂದರೆಗೊಳಗಾದ ಬಾಧಿತರನ್ನು ಕೌಟುಂಬಿಕ ಸಮಾಲೋಚನೆ ಮಾಡಿ ಮನಸ್ಥೈರ್ಯ ತುಂಬುವುದರ ಜೊತೆಗೆ ಉಚಿತ ವೈದ್ಯಕೀಯ ತಪಾಸಣೆ, ಉಚಿತ ಕಾನೂನು ನೆರವು ಹಾಗೂ ತಾತ್ಕಾಲಿಕ ವಸತಿ ಆಶ್ರಯವನ್ನು ಕಲ್ಪಿಸಿ, ಸೂಕ್ತ ಪರಿಹಾರವನ್ನು ಒದಗಿಸಿಕೊಡಲಾಗುತ್ತದೆ ಎಂದು ತಿಳಿಸಿದರು.

ಸಖಿ ಘಟಕದ ಆಡಳಿತಾಧಿಕಾರಿ ಯಮುನಾ ಮಾತನಾಡಿ, ಬೇಡವಾದ ಗರ್ಭಧಾರಣೆ ಇದ್ದಲ್ಲಿ 24 ವಾರಗಳ ಅವಧಿ ಮೀರಿದ ನಂತರ ತಾಯಿ ಗರ್ಭದಲ್ಲಿ ಮಗುವಿನ ಬೆಳವಣಿಗೆ ಹೃದಯ ಬಡಿತ ದೇಹದ ಬೆಳವಣಿಗೆ ಸಂಪೂರ್ಣವಾಗಿ ಮೂಡಿರುತ್ತದೆ. ಆದರೆ ತನಗೆ ಗರ್ಭ ಬೇಡವೆಂದು ವೈದ್ಯರಿಗೆ ತಿಳಿಸಿದಾಗ ವೈದ್ಯರು ಗರ್ಭಪಾತ ಸೂಕ್ತವಲ್ಲವೆಂದು ತಿಳಿ ಹೇಳಿದಾಗ್ಯೂ ಕೂಡ, ಮಹಿಳೆಯು ತನಗೆ ತಾನೇ ಔಷಧ ಅಂಗಡಿಯಿಂದ ಮಾತ್ರೆಗಳನ್ನು ತೆಗೆದುಕೊಂಡು ತೀವ್ರರಕ್ತಸ್ರಾವದಂತಹ ಸಮಸ್ಯೆಗೆ ಒಳಗಾಗುತ್ತಾರೆ. ಇದು ತಾಯಿ ಜೀವಕ್ಕೆ ಮತ್ತು ಗರ್ಭದಲ್ಲಿನ ಮಗುವಿಗೂ ಕಂಟಕವಾಗಿರುತ್ತದೆ ಇಂತಹ ಅವಘಡಗಳನ್ನು ತಪ್ಪಿಸುವಲ್ಲಿ ಸುರಕ್ಷಿತವಾದ ಪೋಷಣೆ ಆರೈಕೆಯನ್ನು ಸರ್ಕಾರದಿಂದ ಸಖಿ ಒನ್ ಸ್ಟಾಪ್ ಸೆಂಟರ್ ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆಯ "ಒಂದೇ ಸೂರಿನಲ್ಲಿ ಸಮಗ್ರ ಸೌಲಭ್ಯ" ಅಡಿಯಲ್ಲಿ ಆಶ್ರಯ, ಪೋಷಣೆ ಆರೈಕೆಯನ್ನು ಪಡೆದುಕೊಳ್ಳುವ ಅವಕಾಶವನ್ನು ಕಲ್ಪಿಸಲಾಗುತ್ತದೆ ನಂತರ ತಾಯಿಗೆ ಮಗು ಬೇಡವೆಂದಾದರೆ ಮಮತೆಯ ತೊಟ್ಟಿಲು ಯೋಜನೆ ಅಡಿಯಲ್ಲಿ ಮಗುವನ್ನು ಇಲಾಖೆಗೆ ಶರಣಾಗತಿ ಮಾಡಬಹುದಾಗಿರುತ್ತದೆ ಹಾಗೂ ಭಾದಿತ ಮಹಿಳೆಯ ಕುರಿತು ಗೌಪ್ಯತೆಯನ್ನು ಕಾಪಾಡಲಾಗುತ್ತದೆ ಎಂದು ತಿಳಿಸಿದರು.

ಭಾಗ್ಯನಗರ ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷರಾದ ಶಾರದಾ ಆರ್. ಪಾನ್‌ಘಂಟಿ ಪ್ರಾಯೋಗಿಕ ಮಮತೆಯ ತೊಟ್ಟಿಲನ್ನು ಕೊಡಗೆಯಾಗಿ ನೀಡಿದರು. ಕೊಪ್ಪಳದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ, ಕನಕಗಿರಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರುಪಾಕ್ಷಪ್ಪ, ತಂಡ ಸದಸ್ಯರು ಮತ್ತು ಸಖಿ ಒನ್ ಸ್ಟಾಪ್ ಸೆಂಟರ್ ಸದಸ್ಯರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ ಭಾಗವಹಿಸಿದ್ದರು.

## ವಚನ ಅರಿವು

### ಯಾವುದು ಮಾಯೆ?

**ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ.**

**ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ.**

**ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲ.**

**ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ.**

**– ಅಲ್ಲಮಪ್ರಭು**

ಮೊದಲಿನಿಂದಲೂ ಮನುಷ್ಯ ತನ್ನ ತಪ್ಪನ್ನು ತನ್ನ ಮೇಲೆ ಹಾಕಿಕೊಳ್ಳದೆ ಬೇರೆಯವರ ಮೇಲೆ ಹಾಕುತ್ತಲೇ ಬಂದಿದ್ದಾನೆ. ತನ್ನ ಮನಸ್ಸಿನಲ್ಲಿ ಆಸೆಯಿಟ್ಟುಕೊಂಡು ತನ್ನ ಆಸೆಯನ್ನು ಈಡೇರಿಸಿಕೊಳ್ಳುವ ಹಂಬಲದಲ್ಲಿ ಯಾವ ದಾರಿಯನ್ನು ಬೇಕಾದರೂ ಹಿಡಿದು ಸಾಗಬಲ್ಲ. ತನ್ನ ಪ್ರತಿಷ್ಠೆಗಾಗಿ ಬಂಗಾರ, ಸಿರಿ, ಸಂಪತ್ತನ್ನು ತನ್ನ ಸ್ವತ್ತಾಗಿಸಿಕೊಳ್ಳುತ್ತಾನೆ. ಭೂಮಿಯ ಮಾಲಿಕನಾಗಿ ಆಳುಕಾಳುಗಳನ್ನು ನಿಯಂತ್ರಣ ದಲ್ಲಿಟ್ಟುಕೊಂಡು ಒಡೆಯ ಎನ್ನಿಸಿಕೊಳ್ಳುತ್ತಾನೆ. ತನ್ನ ಇಚ್ಛೆ ಪೂರೈಕೆಗಾಗಿ ಹೆಣ್ಣನ್ನು ತನ್ನ ಅಧೀನವೆಂದು ಅಧಿಕಾರ ಚಲಾಯಿಸುತ್ತಾನೆ. ಮಾಯೆ ಎಂದು ಜರಿದು, ಮಹಿಳೆಯನ್ನು ವಸ್ತುಗಳ ಸಾಲಿನಲ್ಲಿಟ್ಟು ಪುರುಷಾಹಂಕಾರದಲ್ಲಿ ವರ್ತಿಸುತ್ತಾನೆ. ತನ್ನ ಮನದಲ್ಲಿರುವ ಭ್ರಾಂತಿಯೇ ಮಾಯೆ ಎಂಬುದನ್ನು ಅರಿಯುವದಿಲ್ಲ. ಹಾಗಾಗಿ ಹೆಣ್ಣು, ಹೊನ್ನು, ಮಣ್ಣು ಮಾಯೆಯಲ್ಲ ನಿಮ್ಮ ಮನಸ್ಸಿನಲ್ಲಿರುವ ಆಸೆಯೇ ಮಾಯೆ ಎನ್ನುತ್ತಾನೆ ಅಲ್ಲಮಪ್ರಭು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

**ಕವಿ ಮನಸು**

ನುಡಿನಮನ

## ನಟನೆ ನಿಲ್ಲಿಸಿದ ಲೀಲಾ!



ಲೀಲಾ ಕಿರಣ್ ಎಂಬ ನಾಮದಿಂದ
ದಕ್ಷಿಣ ಕನ್ನಡ ಜಿಲ್ಲೆಯ
ಬೆಳ್ತಂಗಡಿಯಲ್ಲಿ ಜನಿಸಿದ ನಟಿಯು;
ಚಂಚಲಾಕುಮಾರಿ ಪಾತ್ರದಿ ತೆರೆಗೆ ಬಂದು;
ನಾಟಕದ ಮೂಲಕ ರಂಗಭೂಮಿಗೆ ಪ್ರವೇಶಿಸಿ;
ಭಕ್ತಪ್ರಹ್ಲಾದ ಮಾಂಗಲ್ಯ ಭಾಗ್ಯದಿ ಪಾತ್ರವ
ಮಾಡಿ;!!


ರಾಣಿ ಹೊನ್ನಮ್ಮ ಚಿತ್ರಕೆ ನಾಯಕಿಯಾಗಿ;
ಹಲವು ಚಿತ್ರಗಳಲ್ಲಿ ಬಹುಮುಖ ಪಾತ್ರದಿ
ಮಿಂಚಿ;
ಡಾಕ್ಟರ್ ಕೃಷ್ಣ ಚಿತ್ರದ ನಟನೆಗೆ ರಾಜ್ಯಪುರಸ್ಕಾರ
ಪಡೆದು;
ವಿವಿಧ ಭಾಷೆಯ ಸಿನಿಮಾಗಳಲ್ಲಿ ನಟನೆ
ಮಾಡಿ;
ಆರು ಸಿನಿಮಾಗಳಿಗೆ ಬಣ್ಣಹಚ್ಚಿದ ಗಟ್ಟಿಗಿತ್ತಿ!

ತೆಲುಗು ಚಿತ್ರರಂಗಕೆ ವಾಲ್ಮೀಕಿಯಲ್ಲಿ ಬಂದು;
ಪತ್ತಿನಾಥರ್ ಮೂಲಕ ತಮಿಳಿಗೆ ಪ್ರವೇಶ
ಪಡೆದು;
ಪಾಮಸಿರಾಜದಿ ನಟಿಸಿ ಮಲೆಯಾಳಿಗೆ
ಸಂಧಿಸಿ;
ಸಾವಿರದೂರ್ತಿ ಸಾವಿತ್ರಿಯಿಂದ ತುಳುವಿಗೆ
ಅನುಬಂಧಿಸಿ;!

ಕನ್ನಡದೇವಿಯ ಸೇವೆಯ ಮಾಡಿ ;
ತುಮಕೂರು ವಿವಿಯಿಂದ ಗೌರವ ಡಾಕ್ಟರೇಟ್
ಪಡೆದು;
ಅನುಭವದ ಮೂಸೆಯಿಂದ ಬದುಕನು ನಡೆಸಿ;
ಮಾದರಿಯಾದ ಅಪರೂಪದ ನಾಯಕಿ
ಎಂ.ಲೀಲಾವತಿ ;
ಕನ್ನಡಿಗರ ಹೃದಯದಲ್ಲಿ ನೆಲೆಸಿದ ಶ್ರೀಮಂತೆ
ಕನ್ನಡಚಿತ್ರರಂಗದ ನಟನಾ ಶಿರೋಮಣಿ;
ಮತ್ತೇ ಮತ್ತೇ ಹುಟ್ಟಿ ಬನ್ನಿ ಈ
ಕನ್ನಡ ನೆಲದ ಅನಂತ ಆರತಿ!

– ಕಾಡಜ್ಜಿ ಮಂಜುನಾಥ

**ತುಂಗಭದ್ರಾ ನೀರಿನ ಮಟ್ಟ**



| ಶನಿವಾರ : 09-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1591.68 ಅಡಿ |
| ಒಳ ಹರಿವು | 725 ಕ್ಯುಸೆಕ್ |
| ಹೊರ ಹರಿವು | 2535 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 12.494 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.58 ಅಡಿ |
| ಒಳ ಹರಿವು | 998 ಕ್ಯುಸೆಕ್ |
| ಹೊರ ಹರಿವು | 6162 ಕ್ಯುಸೆಕ್ |
| ಸಾಮರ್ಥ್ಯ | 88.828 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಹಂಪಿ ಪ್ರದೇಶದಲ್ಲಿ ವೀರಭದ್ರನ ಆರಾಧನೆ

### ಸ ವೀರೋ ಧಕ್ಷ ಸಾದನೋ ವಿಯಸ್ತಂಭ ರೋದಸಿ. – ಋಗ್ವೇದ.

**ಹಂಪಿ ಒಳನೋಟ**




**ಎಂ.ಎಂ.ಶಿವಪ್ರಕಾಶ**
**ಹೊಸಪೇಟೆ**
**ಮೊ: 9449654489**



ಉದ್ದಾನ ವೀರಭದ್ರ

ದಕ್ಷನ ದರ್ಪವನ್ನು ನಾಶಪಡಿಸಿದ, ನೆಲದಿಂದ ಬಾನಿನವರೆಗೆ ಆವರಿಸಿದ ವಿರಾಟ್ ಜ್ಯೋತಿ ಸ್ತಂಭರೂಪಿ ವೀರಭದ್ರನಾಗಿದ್ದಾನೆ. ದಕ್ಷಬ್ರಹ್ಮನ ಯಜ್ಞವನ್ನು ನಾಶ ಮಾಡಲು ಶಿವನ ಕೋಪಾಗ್ನಿ ಪ್ರತಿರೂಪವೇ ವೀರಭದ್ರನ ಅವತಾರ. ಕೂರ್ಮ ಪುರಾಣ, ವರಹ ಪುರಾಣ, ಸ್ಕಂದ ಪುರಾಣ, ಭಾಗವತ ಪುರಾಣಗಳಲ್ಲಿಯೂ ವೀರಭದ್ರನ ಅವತಾರದ ಬಗ್ಗೆ ವಿವರಣೆ ಸಿಗುತ್ತದೆ. ಇವನು ಲಿಂಗ ರೂಪದಲ್ಲಿ ಹಾಗೂ ಮೂರ್ತಿರೂಪದ ಸ್ವರೂಪದಲ್ಲಿಯೂ ಇದ್ದಾನೆ. ಉತ್ತರದ ಕೇದಾರದಿಂದ ದಕ್ಷಿಣದ ರಾಮೇಶ್ವರದವರಿಗೂ ಇವನ ದೇವಸ್ಥಾನಗಳು, ಆರಾಧನೆ, ಪರಂಪರೆ ಇದೆ. ಕನ್ನಡ ನಾಡಿನಲ್ಲಿ ಪ್ರತಿ ಊರು ಗ್ರಾಮಗಳಲ್ಲಿಯೂ ಸಾಹಿತ್ಯ, ಕಾವ್ಯ ,ರಗಳೆ ವಚನ ,ಒಡಬು
ಪುರವಂತಿಕೆ, ಪುರಾಣ, ಖಡ್ಗ, ತಾರಾವಳಿ ,ಶಿಲ್ಪ ಚಿತ್ರ ಜಾನಪದ, ರಂಗಭೂಮಿ ಹೀಗೆ ಎಲ್ಲಲ್ಲಿಯೂ ವೀರಭದ್ರನ ವರ್ಣನೆ, ಪರಂಪರೆಯ ಆಚರಣೆ ನಡೆದುಕೊಂಡು ಬಂದಿದೆ. ಅನ್ಯಾಯ,
ಶೋಷಣೆ, ಅಸಮಾನತೆ, ಅಹಂಕಾರಗಳ ವಿರುದ್ಧ ನಿಂತು ಜನಸಾಮಾನ್ಯರ ಶಕ್ತಿ ಪ್ರೇರಕನಾಗಿದ್ದವನು ವೀರಭದ್ರ. ವೀರಭದ್ರನಿಂದಾದ ಯಜ್ಞ ಕ್ರಾಂತಿ ಹಲವಾರು ಆಚರಣೆಗಳಿಗೆ ಕಾರಣವಾಯಿತು. ಅವುಗಳೆಂದರೆ ಅಗ್ನಿಕುಂಡ ಹಾಯುವುದು, ವೀರಗಾಸೆ, ಲಿಂಗದ ವೀರವಂತಿಕೆ, ಪೂಜಾ ಮಂಟಪದ ಪೂಜಾ ವಿಧಾನ, ಧೂಪದಾರತಿ ಚರ್ಮ ವಾದ್ಯ ನಿರ್ಮಾಣ ,ಜಾತಿ ಮತಗಳ ಆಚೆಗೂ ವೀರಭದ್ರ ಜಾತ್ಯಾತೀತವಾಗಿ ಪೂಜಿಸುವ ಆರಾಧಿಸುವ ಗೌರವಿಸುವ ರೂಢಿ,ಪದ್ದತಿ ಈ ವೀರಭದ್ರ ಪರಂಪರೆಯಿಂದ ನಡೆದುಕೊಂಡು ಬಂದಿದೆ. ವೀರಭದ್ರನು ಯಜ್ಞವನ್ನು ನಾಶ ಮಾಡಿದ ಕಾರಣದಿಂದ ಪ್ರತಿಯಾಗಿ ಅಗ್ನಿಕುಂಡವನ್ನು ನಿರ್ಮಿಸಿ ಅದರಲ್ಲಿ ಕೆಂಡವನ್ನು ತುಳಿಯುವುದರ ಮೂಲಕ ಯಜ್ಞವನ್ನು ಅವಮಾನಿಸುವ ಪರಂಪರೆ, ಯಜ್ಞ ಕೊಂಡವನ್ನು ತುಳಿದು ವೀರಭದ್ರ ತನ್ನವರ ಪರಿಶುದ್ಧ ಚಾರಿತ್ರವನ್ನು ಪ್ರಕಟಿಸಿದ್ದ ಪರಂಪರೆ. ವೀರಭದ್ರನ ಭಕ್ತರಾದ ಪುರವಂತರು,ವೀರಗಾಸೆಯವರು, ಶಿವಭಕ್ತರು ಅಗ್ನಿಕುಂಡವನ್ನು ತುಳಿದು ಅಗ್ನಿಗೆ ಅಂಟಿದ ದೋಷವನ್ನು ತೆಗೆಯುತ್ತಾರೆ ಅಥವಾ ದೋಷವನ್ನು ನಿವಾರಿಸುತ್ತಾರೆ ಎಂಬುದರ ಪ್ರತೀಕವಾಗಿ ಇವತ್ತಿಗೂ ಅಗ್ನಿ ಕುಂಡವನ್ನು ಹಾಯುವ ಪರಂಪರೆ ನಡೆದುಕೊಂಡು ಬರುತ್ತಿದೆ. ಹೀಗಾಗಿ ವೀರಭದ್ರನ ಚರಿತ್ರೆ ಅಗಾಧವಾದದ್ದು. ಈ ನಿಸ್ಸೀಮ ನಿಲುವಿನ ಪ್ರಾಚೀನ ಪರಂಪರೆಯ ವೀರಭದ್ರನಿಗೆ ವಿಜಯನಗರ ಸಾಮ್ರಾಜ್ಯದ ಅರಸರು ನಾಡಿನ ಹಲವು ಕಡೆ ದೇವಾಲಯಗಳನ್ನು ನಿರ್ಮಿಸಿದ್ದಾರೆ. ವಿಶೇಷವಾಗಿ ಹಂಪಿಯ ಪ್ರದೇಶದಲ್ಲಿ ವೀರಭದ್ರನ ದೇವಸ್ಥಾನಗಳು ಹಾಗೂ ದೇವಾಲಯಗಳಲ್ಲಿ, ಬಂಡೆಗಳ ಮೇಲೆ ವಿವಿಧ ಭಂಗಿಗಳಲ್ಲಿ ವೀರಭದ್ರನ ಮೂರ್ತಿ, ಶಿಲ್ಪಗಳು, ಉಬ್ಬು ಶಿಲ್ಪಗಳು



ಕಾಣಸಿಗುತ್ತವೆ. ಒಂದು ಅಂದಾಜಿನ ಪ್ರಕಾರ ಹಂಪಿ ಪರಿಸರದಲ್ಲಿ 1200ಕ್ಕೂ ಹೆಚ್ಚು ದೇವಾಲಯಗಳಿವೆ. ಆದರೆ ಅವುಗಳು ಹಾಳಾಗಿವೆ ಹಾಗೂ ಅವುಗಳಲ್ಲಿ ಮೂರ್ತಿಗಳು ಇಲ್ಲದೆ ಇರುವುದರಿಂದ ಇವುಗಳು ಯಾವ ಯಾವ ದೇವಸ್ಥಾನಗಳೆಂದು ಗುರುತಿಸಲು ಕಷ್ಟವಾಗಿರ ಬಹುದು. ಆದರೆ ಹಂಪಿಯ ವಿರೂಪಾಕ್ಷ ದೇವಸ್ಥಾನದ ಗೋಪುರ ಗಳ ಗಾರೆ ಶಿಲ್ಪಗಳಲ್ಲಿ, ಪ್ರಾಂಗಣದ ಕಂಬಗಳಲ್ಲಿ ಹಲವಾರು ವೀರಭದ್ರನ ಶಿಲ್ಪಗಳಿವೆ. ಹಾಗೇನೆ ಹಂಪಿಯ ವಿವಿಧ ಸ್ಥಳ, ಮಂಟಪ, ಕಲ್ಲಬಂಡೆಗಳಲ್ಲಿಯು ವೀರಭದ್ರನ ಶಿಲ್ಪಗಳಿವೆ. ಹಾಗೇನೆ ಇಲ್ಲಿ ರಚನೆಗೊಂಡ ಸಾಹಿತ್ಯವು ಸಹ ವೀರಭದ್ರನಿಂದ ಹೊರತಾಗಿಲ್ಲ. ಹಂಪಿಯ ರಾಘವಾಂಕ ಕವಿ ವೀರೇಶ ಚರಿತೆ ಎಂಬ ಕೃತಿಯನ್ನು ರಚಿಸಿದ್ದು ಹಂಪಿಯಲ್ಲಿಯೇ.ಹಂಪಿ ಪ್ರದೇಶದಲ್ಲಿ ನೂರಾರು ವೀರಭದ್ರನ ಮೂರ್ತಿ,ಶಿಲ್ಪ, ಸಾಹಿತ್ಯವನ್ನು ಗಮನಿಸಿದರೆ ಇದು ವೀರಭದ್ರನ ನೆಲೆಯಾಗಿತ್ತು ಎನ್ನುವುದರಲ್ಲಿ ಅನುಮಾನವಿಲ್ಲ. ಹಂಪಿ ಪ್ರದೇಶದ ವೀರಭದ್ರ ಮೂರ್ತಿ ,ಶಿಲ್ಪಗಳು, ಸಾಹಿತ್ಯ ಕುರಿತು ಒಂದಿಷ್ಟು ಮಾಹಿತಿ ನಿಮ್ಮ ಓದಿಗಾಗಿ.

ಹಂಪಿ ನೆಲದ ಧಾರ್ಮಿಕ, ಸಾಂಸ್ಕೃತಿಕ ಚರಿತ್ರೆ,ಅಸ್ಮಿತೆ ಅತ್ಯಂತ ಮಹತ್ವದ್ದು. ಬಹುಮುಖಿ ಆಯಾಮಗಳನ್ನು ಹೊಂದಿರುವ ಹಂಪಿಗೆ ಪಂಪಾ ವಿರೂಪಾಕ್ಷನೇ ಅಧಿದೈವ. ಹನುಮ ಜನಿಸಿದ ನಾಡೆಂದು ಪ್ರಸಿದ್ಧಿ ಪಡೆದಿದೆ. ಇದರೊಂದಿಗೆ ವೀರಭದ್ರ ಆರಾಧನೆಯ ನೆಲವು ಹೌದು. ಹಂಪಿಯಲ್ಲಿರುವ ವೀರಭದ್ರನ ಮೂರ್ತಿ ಶಿಲ್ಪಗಳನ್ನು ಕಂಡು ಖ್ಯಾತ ಸಂಶೋಧಕರಾಗಿದ್ದ ಡಾ. ಎಂಎಂ ಕಲಬುರ್ಗಿಯವರು ತಮ್ಮ ಮಾರ್ಗ 3 ಸಂಪುಟದಲ್ಲಿ ಹಂಪಿಯಲ್ಲಿ ಲಿಂಗ ರೂಪದ ವೀರಭದ್ರನೆ ಮುಂದೆ ವಿರೂಪಾಕ್ಷನೆಂಬ ಹೆಸರು ಪಡೆದನೆಂದು ಹೇಳಬಹುದಾಗಿದೆ ಎಂದು ಊಹಿಸಿರುತ್ತಾರೆ ಮತ್ತು ರೌದ್ರಭಾವದ ವೀರಭದ್ರನ ಇನ್ನೊಂದು ರೂಪವೇ ರೌದ್ರಭಾವದ ವಿರೂಪಾಕ್ಷ ನಾಗಿರಬಹುದು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ವೀರಭದ್ರನು ಬೆಳಗಾವಿ ಜಿಲ್ಲೆಯ ಯಡೂರಿನಲ್ಲಿ, ಬಸವಕಲ್ಯಾಣದ ತ್ರಿಪುರಾಂತಕ ಮಠ, ಕೊಡಗಿನ ಹೆಗ್ಗಳದ ಪೆರುಮಲೆಯಲ್ಲಿ ವೀರಭದ್ರ ಲಿಂಗ ರೂಪದಲ್ಲಿ ಪೂಜೆಗೊಳ್ಳುತ್ತಿದ್ದಾನೆ. ಹೀಗಾಗಿ ಹಂಪಿಯು ಲಿಂಗ ರೂಪದ ವೀರಭದ್ರ ವಿರೋಪಾಕ್ಷ ನಾಗಿರಬಹುದು ಎಂದು ತಮ್ಮ ಸಂಶೋಧನಾ ಲೇಖನವನ್ನು ಪ್ರಕಟಿಸಿದ್ದಾರೆ. ಈ ಸಂಶೋಧನೆ ಅಭಿಪ್ರಾಯಗಳೇನೇರಲಿ, ವಿಜಯನಗರ ಕಾಲದ ಹಂಪಿ ಪ್ರದೇಶದಲ್ಲಿ ಸುಮಾರು ನೂರಾರು ವೀರಭದ್ರನ ಮೂರ್ತಿ ಶಿಲ್ಪ ಚಿತ್ರ ಕಾಣಿಸಿಗುತ್ತವೆ. ಇವುಗಳಲ್ಲಿ ಪ್ರಮುಖವಾಗಿ ಮಾತಂಗ ಪರ್ವತದ ಮೇಲಿರುವ ಮಾತಂಗ ವೀರಭದ್ರ ಹಾಗೂ ಮುದ್ದಾದ ವೀರಭದ್ರ ಅಥವಾ ಉದ್ದಾನ ವೀರಭದ್ರ ದೇವಸ್ಥಾನಗಳು ಅತ್ಯಂತ ಪ್ರಾಮುಖ್ಯತೆಗೊಂಡು ಇಂದಿಗೂ ಪೂಜೆ ಗೊಳ್ಳುತ್ತಿವೆ. ಇಷ್ಟೇ ಅಲ್ಲ ಚತುರ್ಭುಜ ವೀರಭದ್ರ, ದ್ವಿಭುಜ ವೀರಭದ್ರ, ಮಂಡೆ ವೀರಭದ್ರ ಹೀಗೆ ಹಲವಾರು ಭಂಗಿಯ ವೀರಭದ್ರಗಳು ಹಂಪಿಯ ಪ್ರದೇಶದಲ್ಲಿವೆ. ಜಂಬುನಾಥ ಬೆಟ್ಟ, ತಿಮ್ಮಲಾಪುರ, ಕಮಲಾಪುರದಲ್ಲಿ ವಿಶೇಷವಾದ ವೀರಭದ್ರ ಮೂರ್ತಿಗಳು ಹಾಗೂ ಶಿಲ್ಪಗಳಿವೆ.

## ಮಾತಂಗ ವೀರಭದ್ರ.

ಹಂಪಿಯಲ್ಲಿರುವ ಮಾತಂಗ ಪರ್ವತಕ್ಕೆ ಧಾರ್ಮಿಕ ಪೌರಾಣಿಕ ಚಾರಿತ್ರಿಕ ಮಹತ್ವವಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯಲ್ಲಿ ಬಹು ಎತ್ತರದ ಬೆಟ್ಟ ಪ್ರದೇಶವೇ ಮಾತಂಗ ಪರ್ವತ. ಈ ಎತ್ತರದ ಪರ್ವತದ ಮೇಲೆ ವೀರಭದ್ರ ದೇಗುಲವನ್ನು ನಿರ್ಮಾಣ ಮಾಡಲಾಗಿದೆ.ಇದನ್ನು ಮಾತಂಗ ವೀರಭದ್ರ ಎಂದು ಕರೆಯುತ್ತಾರೆ. ಎತ್ತರದ ಬೆಟ್ಟದ ಮೇಲೆ ನಿರ್ಮಿಸಿರುವ ಈ ವೀರಭದ್ರ ದೇವಸ್ಥಾನವನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯದಲ್ಲಿ ವೀರಭದ್ರ ಆರಾಧನೆ –ಪರಂಪರೆ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿತ್ತು ಎಂಬುದು ಗೊತ್ತಾಗುತ್ತದೆ. ಅಂದಿನಿಂದ ಇಂದಿನವರೆಗೂ ಈ ಮಾತಂಗ ವೀರಭದ್ರ ಪೂಜೆಗೊಳ್ಳುತ್ತಿದ್ದಾನೆ. ಹಲವಾರು ಜನರ ಮನೆದೇವರಾಗಿರುವ ಈ ವೀರಭದ್ರನಿಗೆ ವರ್ಷಕ್ಕೊಮ್ಮೆ ಭಕ್ತರು ಬಂದು ಪೂಜೆ ಅಭಿಷೇಕ ಮಾಡಿಸಿ ಹೋಗುತ್ತಿದ್ದಾರೆ.

## ಉದ್ದಾನ ವೀರಭದ್ರ

ಕಮಲಾಪುರಕ್ಕೆ ಹೋಗುವ ದಾರಿಯಲ್ಲಿರುವ ಈ ದೇವಸ್ಥಾನವನ್ನು ಶಾಸನದಲ್ಲಿ ಮುದ್ದು ವೀರಣ್ಣ ಎಂದು ಕರೆಯಲಾಗಿದೆ. ಆದರೆ ಇವನು ಗಾತ್ರದಲ್ಲಿ ಬೃಹತ್ ಆಗಿರುವುದರಿಂದ ಇವನನ್ನು ಉದ್ಧಾನ ವೀರಭದ್ರನೆಂದು ಕರೆಯಲಾಗುತ್ತಿದೆ. ಈ ದೇವಾಲಯವನ್ನು ವಿಜಯನಗರದ ಅಳಿಯ ರಾಮರಾಯನ ಸಹೋದರ ಎರೆತಿಮ್ಮ ರಾಜಯ್ಯನ ದಳವಾಯಿ ಜಂಗಮಯ್ಯನು 1545ರಲ್ಲಿ ಕಟ್ಟಿಸಿದ. ಈ ದೇವಸ್ಥಾನದಲ್ಲಿ ವೀರಭದ್ರನ ಪೂಜೆ ಆಚರಣೆ ಸಂಪ್ರದಾಯಗಳು, ಅಗ್ನಿಕುಂಡ ಹಾಯುವುದು ನಿರಂತರವಾಗಿ ನಡೆದುಕೊಂಡು ಬಂದಿವೆ. ಈ ಉದ್ದಾನ ವೀರಭದ್ರನು ಕರ್ನಾಟಕ– ಆಂಧ್ರದ ಹಲವಾರು ಜನರ ಮನೆದೇವರಾಗಿದ್ದಾನೆ. ಈತನ ಭಕ್ತರು ಅಮವಾಸೆ, ಶ್ರಾವಣ –ಕಾರ್ತೀಕ ಮಾಸಗಳಲ್ಲಿ, ಅಗ್ನಿಕುಂಡ ಹಾಯುವ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಈ ಬೃಹತ್ತಾದ ವೀರಭದ್ರನ ಮೂರ್ತಿಯು ಅಪರೂಪದ್ದಾಗಿದೆ.

## ಮಂಡಿ ವೀರಭದ್ರ.

ಎಲ್ಲಾ ಊರುಗಳಲ್ಲಿ ಸಾಮಾನ್ಯವಾಗಿರುವ ವೀರಭದ್ರ ಮೂರ್ತಿಗಳನ್ನು, ಶಿಲ್ಪಗಳನ್ನು ನಾವು ಕಾಣುತ್ತೇವೆ. ಆದರೆ ಹಂಪಿಯ ಪ್ರದೇಶದಲ್ಲಿ ವಿಶೇಷ ಭಂಗಿಯಲ್ಲಿರುವ ವೀರಭದ್ರನ ಮೂರ್ತಿಗಳು ಶಿಲ್ಪಗಳು ನೋಡಲು ಕಾಣ ಸಿಗುತ್ತವೆ. ಇದರಲ್ಲಿ ಮಂಡಿಯನ್ನು ಊರಿ ನಿಂತಿರುವ ಭಂಗಿಯಲ್ಲಿರುವ ವೀರಭದ್ರನ ಶಿಲ್ಪವು ವಿಶೇಷವಾಗಿದೆ. ಇದನ್ನು ಮಂಡಿ ವೀರಭದ್ರನೆಂದು ಕರೆಯುತ್ತಿದ್ದಾರೆ . ಇದು ಮಾತಂಗ ಪರ್ವತದ ಪೂರ್ವಕ್ಕೆ ಹಾಳು ಬಿದ್ದಿರುವ ದೇವಾಲಯ ಒಂದರಲ್ಲಿ ಈ ಮೂರ್ತಿ ಕಂಡುಬರುತ್ತದೆ. ಇದು ಸುಮಾರು 6 ರಿಂದ 7 ಅಡಿ ಎತ್ತರವಿದೆ. ಬಲಗಾಲಿನ ಮೊಣಕಾಲನ್ನು ನೆಲಕ್ಕೆ ಮುಟ್ಟಿಸಿ ನಿಂತಿದ್ದಾನೆ. ಕೈಯಲ್ಲಿ ಬಿಲ್ಲು ಬಾಣ ಖಡ್ಗ ಖೇಟವನ್ನು ಹಿಡಿದಿರುವನು. ಈ ಹಾಳು ಬಿದ್ದಿರುವ ಮಂಡಿ ವೀರಭದ್ರ ದೇವಸ್ಥಾನದ ಕಟ್ಟಡದ ವಿನ್ಯಾಸವನ್ನು ಗಮನಿಸಿದಾಗ ಇದು ಏನು ಒಂದು ಮಠವಾಗಿದ್ದಿರಬಹುದೆಂದು
ಹಂಪಿ ಪ್ರದೇಶದ ಪುರಾತತ್ವ ಶೋಧದ ಕಾರ್ಯದಲ್ಲಿ ಪಾಲ್ಗೊಂಡು ಅನುಭವವಿರುವ ಕನ್ನಡ ವಿಶ್ವವಿದ್ಯಾಲಯದ ಹುಸೇನ್ ಅವರು ಅಭಿಪ್ರಾಯಪಡುತ್ತಾರೆ. ಈ ದೇವಸ್ಥಾನವು ಹಾಳುಬಿದ್ದಿರುವುದರಿಂದ ಇಲ್ಲಿ ಮುಳ್ಳು ಹಂದಿ, ಚಿರತೆಗಳ ಇರುವಿಕೆ ಕಂಡು ಬಂದಿದೆ. ಹೀಗಾಗಿ ಇಲ್ಲಿಗೆ ಹೋಗಬಯಸುವವರು ಗುಂಪಾಗಿ ಜನರೊಟ್ಟಿಗೆ ಹೋಗುವುದು ಸೂಕ್ತವಾಗಿದೆ.

## ಕಮಲಾಪುರದ ಸಹಯೋಗಿ ಲಿಂಗ.

ಹಂಪಿಯ ಭಾಗವೇ ಆಗಿದ್ದ ಕಮಲಾಪುರದಲ್ಲಿ ವೀರಭದ್ರನ ದೇವಸ್ಥಾನವಿದೆ. ಈ ದೇವಸ್ಥಾನವು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿದೆ. ದೇವಸ್ಥಾನದಲ್ಲಿ ವೀರಭದ್ರನ ಮೂರ್ತಿ ಜೊತೆಗೆ ಸಹಯೋಗಿ ಲಿಂಗ ,ಬನ್ನಿ ಮಹಾಂಕಾಳಮ್ಮ ಹಾಗೂ ಗಣೇಶ ಮೂರ್ತಿಗಳು ಒಟ್ಟಿಗೆ ಇರುವುದು ವಿಶೇಷವಾಗಿದೆ. ವೀರಭದ್ರನನ್ನು ಲಿಂಗ ರೂಪದಲ್ಲಿ ಅಥವಾ ಮೂರ್ತಿ ರೂಪದಲ್ಲಿ ನಾವು ನೋಡುತ್ತೇವೆ. ಆದರೆ ಈ ದೇವಸ್ಥಾನದಲ್ಲಿ ಲಿಂಗ ಮತ್ತು ಮೂರ್ತಿ ಎರಡು ರೂಪದಲ್ಲಿ ವೀರಭದ್ರನವನ್ನು ನೋಡಬಹುದಾಗಿದೆ. ಹಾಗಾಗಿ ಇದು ಅಪರೂಪವಾಗಿರತಕ್ಕಂಥ ವೀರಭದ್ರನ ದೇವಸ್ಥಾನವಾಗಿದೆ .ಇಲ್ಲಿ ಕೆಲವು ವೀರಭದ್ರ ಮೂರ್ತಿಗಳು ಸಹ ದೊರೆತಿವೆ ಅವು ರಾಜ್ಯ ಪುರಾತತ್ವ ಇಲಾಖೆ ವಸ್ತು ಸಂಗ್ರಹದಲ್ಲಿ ಇವೆ.

ಹಂಪಿ ಪ್ರದೇಶದಲ್ಲಿ ದಕ್ಷನನ್ನು ಕೊಲ್ಲಲು ಮುನ್ನುಗ್ಗುತ್ತಿರುವ ವೀರಭದ್ರ ಶಿಲ್ಪಗಳು ಹಲವು ಕಡೆ ಕಾಣಿಸಿತ್ತವೆ. ವಿರೂಪಾಕ್ಷ ದೇವಾಲಯದ ಪ್ರಕಾರದ ಕಂಬಗಳಲ್ಲಿ ಮಾಲ್ಯವಂತ ದೇವಾಲಯದ ಹಿಂಬಾಗದ ಬಂಡೆಗಳ ಮೇಲೆ ಕಾಣ ಸಿಗುತ್ತದೆ. ಬಲಭಾಗದ ಕೈಯಲ್ಲಿ ಖಡ್ಗ ಬಾಣ ಹಾಗೂ ಎಡ ಭಾಗದ ಕೈಗಳಲ್ಲಿ ಖೇಟಕ ಮತ್ತು ಧನಸ್ಸನ್ನು ಹಿಡಿದಿರುವ ಅಂದರೆ ದಕ್ಷನ ಬೇಟೆಗೆ ಹೊರಟಿರುವಂತೆ ಭಾಸವಾಗುತ್ತವೆ ಈ ಶಿಲ್ಪಗಳು. ಹೊಸಪೇಟೆ ಜಂಬುನಾಥ ದೇಗುಲದಲ್ಲಿ ಕಂಬಗಳಲ್ಲಿ ಸುಖಾಸನದಲ್ಲಿ ಕುಳಿತು ವಸ್ತ್ರಾಭರಣ ಭೂಸಿದ್ದನಾಗಿದ್ದಾನೆ ಅಷ್ಟ ಭುಜಗಳಿಂದ ಕೂಡಿರುವ ಬಲಪಾತಗಳಲ್ಲಿ ತ್ರಿಶೂಲ ವರುಷ ಬಾಣ ಮತ್ತು ಖಡ್ಗವನ್ನು ಧರಿಸಿದ್ದಾನೆ ಎಡ ಪಾರ್ಶ್ವದ ಹಸ್ತಗಳಲ್ಲಿ ಡಮರು ಬಾಣ ಗುರಾಣಿ ಮತ್ತು ಕತ್ತರಿಸಿದ ಸಿರಬಂದನ್ನು ಹಿಡಿದಿದ್ದಾನೆ ವೀಣಾ ದರ ವೀರಭದ್ರ ಸಹ ಕರ್ಪರೂಪದ ಶಿಲ್ಪವೇಯಾಗಿದೆ ಅಂದಿನ



ಮಂಡಿ ವೀರಭದ್ರ

ಹಂಪಿ ಪ್ರದೇಶಕ್ಕೆ ಒಳಪಟ್ಟಿದ್ದ ಈ ಜಂಬುನಾಥ ದೇಗುಲದಲ್ಲಿ ಈ ಶಿಲ್ಪವನ್ನು ನೋಡಬಹುದಾಗಿದೆ.ಹಾಗೇನೆ ಕಮಲಾಪುರದಲ್ಲಿ ವೀರಭದ್ರನ ದೇವಸ್ಥಾನವಿದೆ. ಹೊಸಪೇಟೆಯಲ್ಲಿ ಸಣ್ಣಕ್ಕಿ ವೀರಭದ್ರ ದೇವಸ್ಥಾನವಿದೆ, ಹೊಸಪೇಟೆಯ ಹೊರವಲಯದ ಕಣವಿ ವೀರಭದ್ರ ದೇವಸ್ಥಾನವಿದೆ. ಹಂಪಿಯ ಕೇಂದ್ರ ಮತ್ತು ರಾಜ್ಯ ವಸ್ತುಸಂಗ್ರಹಾಲಯಗಳಲ್ಲಿ ಹಂಪಿಯಲ್ಲಿ ದೊರೆತಿರುವ ವಿವಿಧ ವೀರಭದ್ರ ಮೊರ್ತಿಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ.
ಹಂಪಿಗೆ ಹತ್ತಿರ ಇರುವ ತಿಮ್ಮಲಾಪುರದಲ್ಲಿಯೂ ದಕ್ಷ ಯಜ್ಞ ಮತ್ತು ಶಿವನೊಂದಿಗೆ ದಕ್ಷ ದುರ್ವರ್ತನೆಯಿಂದ ನಡೆದುದನ್ನು ಚಿತ್ರಿಸುವ ಶಿಲ್ಪವು ಕಾಣಬರುತ್ತದೆ ಉಗ್ರನಾಗಿ ಕಂಡುಬರುವ ವೀರಭದ್ರ ಉದ್ದನೆಯ ಕಿರೀಟ ಕರ್ಣಕುಂಡಲ ಹಾರಗಳನ್ನು ಧರಿಸಿದ್ದಾನೆ ಮೇಲಣ ಎಡಗೈಯಲ್ಲಿ ಧನಸ್ಸನ್ನು ಹಿಡಿದಿದ್ದಾನೆ ಬಲಗೈನಲ್ಲಿ ಬಾಣವನ್ನು ಬತ್ತಳಿಕೆಯಿಂದ ತೆಗೆಯುತ್ತಿದ್ದಾನೆ ಕೆಳಗಣಯ ಬಲಗೈಯಲ್ಲಿ ಚುಚ್ಚುಗತ್ತಿಯನ್ನು ಎಡಗೈಯಲ್ಲಿ ಗದೆಯನ್ನು ಹಿಡಿದಿದ್ದಾನೆ ಮುಂದಿನ ಪಟ್ಟಿಗೆಯಲ್ಲಿ ವೀರಭದ್ರ ದಕ್ಷಿಣ ತಲೆಯನ್ನು ಕತ್ತರಿಸಿದ್ದಾನೆ ಹೀಗೆ ಯಜ್ಞಕ್ಕೆ ಸಂಬಂಧಿಸಿದ ಚಿತ್ರಗಳು ತಿಮಲಾಪುರದ ದೇವಸ್ಥಾನದ ಕಾಣಸಿಗುತ್ತದೆ ಅಪರೂಪದ ಇಂತಹ ವೀರಭದ್ರ ಶಿಲ್ಪಗಳು ಅಂದಿನ ವಿಜಯನಗರದ ಕಾಲಘಟ್ಟದಲ್ಲಿ ಕೆತ್ತಲ್ಪಟ್ಟಿವೆ ತ್ರಿಶೂಲ ಮತ್ತು ಡಮರುಗಳನ್ನು ಹಿಡಿದಿದ್ದಾನೆ. ಇಷ್ಟೇ ಅಲ್ಲದೆ ಅವಿಭಜಿತ ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ಊರಿನಲ್ಲಿಯೂ ವೀರಭದ್ರನ ಪರಂಪರೆ ದೇವಸ್ಥಾನಗಳಿವೆ.ಈ ದೇವಸ್ಥಾನಗಳಿಗೆ ಪ್ರತಿ ವರ್ಷ ಕೆಂಡ ಹಾಯುವ ಪುರವಂತಿಕೆಯ ಪದ್ಧತಿ ನಡೆದುಕೊಂಡು ಬಂದಿದೆ.



## ರಾಜ್ಯದಲ್ಲಿಯೂ ವೀರಭದ್ರನಿಗೆ ದೇಗುಲಗಳು.

ವಿಜಯನಗರ ಸಾಮ್ರಾಜ್ಯ ಸಂದರ್ಭದಲ್ಲಿ ಹಂಪಿ ಪ್ರದೇಶದಲ್ಲಿ ಅಷ್ಟೇ ಅಲ್ಲ, ರಾಜ್ಯದ ತುಂಬೆಲ್ಲ ವೀರಭದ್ರನಿಗೆ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳನ್ನು ನಿರ್ಮಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಹೀಗೆ ನಿರ್ಮಿಸಿದ ಪ್ರಮುಖವಾದ ಕೆಲವು ದೇವಾಲಯಗಳೆಂದರೆ ನಾಗಮಂಗಲ, ನಾಗರಹೊಳೆ ತಲಕಾಡು, ಸಂತೆ ಬಾಚನಹಳ್ಳಿ ,ಬೇಳೂರು,ಆನೆಕೆರೆ ಕಡೂರು,ಕೆಳದಿ ,ಹೀಗೆ ಹಲವಾರು ದೇವಸ್ಥಾನಗಳ ಮಾಹಿತಿ ಲಭ್ಯವಾಗುತ್ತದೆ .ಹಂಪಿ ಪ್ರದೇಶದಲ್ಲಿ ಮತ್ತು ರಾಜ್ಯದಲ್ಲಿ ವಿಜಯನಗರದ ಕಾಲದಲ್ಲಿ ನಿರ್ಮಾಣಗೊಂಡಿರುವ ವೀರಭದ್ರ ದೇಗುಲಗಳನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯದಲ್ಲಿ ವೀರಭದ್ರನ ಆರಾಧನೆ ಪ್ರಮುಖವಾಗಿತ್ತು ಎಂಬುದು ಗೊತ್ತಾಗುತ್ತದೆ .ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಸಾಹಿತ್ಯ ಪರಂಪರೆಗೆ ರಾಜಾಶ್ರಯ ದೊರೆತಿತ್ತು.ಹೀಗಾಗಿ ವೀರಶೈವರ ಹಾಗೂ ಜಾತಿಯನ್ನು ಮೀರಿ ಪೂಜೆಗೊಳ್ಳುವ ವೀರಭದ್ರನ ಪರಂಪರೆ ಜನಪ್ರಿಯತೆಯನ್ನು ಪಡೆದುಕೊಂಡಿತ್ತು ಎನ್ನುವುದು ಗೊತ್ತಾಗುತ್ತದೆ. ಒಟ್ಟಾರೆಯಾಗಿ ನೋಡಿದಾಗ ಹಂಪಿಯ ಪ್ರದೇಶವು ವೀರಭದ್ರನ ಆರಾಧನೆ ಪರಂಪರೆ ಕೇಂದ್ರವಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.









## ಮೈಕ್ರೋ ನ್ಯೂಸ್

### ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸಲಿ

ಮೊದಲ ಪುಟದಿಂದ

ಕೈಗೆತ್ತಿಕೊಳ್ಳಬೇಕು ಎಂದರು. ನಂದಿಪುರದ ಡಾ.ಮಹೇಶ್ವರ ಮಹಾಸ್ವಾಮಿಗಳು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸರ್ಕಾರವು ರೈತರ ವಿಚಾರದಲ್ಲಿ ಮಲತಾಯಿ ಧೋರಣೆ ಮಾಡುತ್ತಿದೆ. ಹೋರಾಟದ ಮೂಲಕ ನ್ಯಾಯ ಕೇಳುವ ಪರಿಸ್ಥಿತಿ ರೈತರಿಗೆ ಬಂದೊದಗಿದೆ. ರೈತರಿಗೆ ಸಮರ್ಪಕ ನೀರು ಒದಗಿಸುವಲ್ಲಿ ಜನಪ್ರತಿನಿಧಿಗಳು ಸೋಲುತ್ತಿದ್ದಾರೆ ಎಂದರು.

ರೈತರ ಅನೇಕ ನೀರಾವರಿ ಸಮಸ್ಯೆ ಆಲಿಸಿ ಸರ್ಕಾರದ ಗಮನಕ್ಕೆ ತರುವ ಕಾರ್ಯ ಮಾಡಲಾಗುವುದು ಎಂದು ಹಿರಿಯ ನಟ ಮುಖ್ಯಮಂತ್ರಿ ಚಂದ್ರ ಭರವಸೆ ನೀಡಿದರು. ಮಠಾದೀಶರ ಧರ್ಮ ಪರಿಷತ್ತಿನಿಂದ ಮುಖ್ಯಮಂತ್ರಿ ಚಂದ್ರು ಅವರನ್ನು ಗೌರವಿಸಲಾಯಿತು. ಇದೇ ವೇಳೆ ಕಾರ್ಯಕ್ರಮದಲ್ಲಿ ಮಠಾದೀಶ್ವರ ಧರ್ಮ ಪರಿಷತ್ತಿನ ಪದಾಧಿಕಾರಿಗಳು ಇದ್ದರು.

### ವಿವಿಧ ಬೇಡಿಕೆ ಹಕ್ಕೊತ್ತಾಯಿಸಿ, ಡಿ.11ಕ್ಕೆ ಬೃಹತ್ ಪ್ರತಿಭಟನೆ

**ಹಂಪಿ ಟೈಮ್ಸ್ ಕೊಟ್ಟೂರು**

ಖಾಸಗಿ ಅನುದಾನ ರಹಿತ ಶಾಲೆಗಳ ವಿವಿಧ ಬೇಡಿಕೆ ಹೀಡೇರಿಸುವಂತೆ ಹಕ್ಕೊತ್ತಾಯಿಸಿ "ಕರ್ನಾಟಕ ರುಪ್ಸಾ ಸಂಘದ ನಡೆ ಬೆಳಗಾವಿ ಸುವರ್ಣ ವಿಧಾನ ಸೌದಧ ಕಡೆ" ಶೀರ್ಷಿಕೆಯಲ್ಲಿ ಡಿ.11 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಹೋರಾಟವನ್ನು ಯಶಸ್ವಿಗೊಳಿಸಲು ಸರ್ವರೂ ಬೆಂಬಲ ವ್ಯಕ್ತಪಡಿಸಬೇಕೆಂದು ಕರ್ನಾಟಕ ರುಪ್ಸಾ ಸಂಘದ ರಾಜ್ಯ ಕಾರ್ಯಾಧ್ಯಕ್ಷರು ಜಿ.ಎಂ.ಕೊಟ್ರೇಶ್ ಕರೆ ನೀಡಿದರು.

ಶನಿವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು ರಾಜ್ಯದಲ್ಲಿ ಖಾಸಗಿ ಅನುದಾನ ರಹಿತ ಶಾಲೆಗಳು ಅನೇಕ ಸಮಸ್ಯೆಗಳಿಂದ ತೊಳಲಾಡುತ್ತಿವೆ ಮತ್ತು ಕೆಲ ಶಿಕ್ಷಣ ಸಂಸ್ಥೆಗಳು ಬಾಗಿಲು ಮುಚ್ಚುವ ಹಂತ ತಲುಪಿವೆ. ಈ ಹಿನ್ನೆಲೆ ಖಾಸಗಿ ಅನುದಾನ ರಹಿತ ಶಾಲೆಗಳ ಮಾನ್ಯತೆ ನವೀಕರಣ ಹೈಕೋರ್ಟ್ ಆದೇಶದಂತೆ ಕನಿಷ್ಠ 10 ವರ್ಷಗಳಿಗೆ ನೀಡುವಂತೆ ಹಾಗೆ ಸ್ಟೇಟ್ ಎಜುಕೇಶನ್ ಪಾಲಿಸಿ ಅನುಷ್ಠಾನ ಕೈಬಿಡುವಂತೆ ಮತ್ತು ಖಾಸಗಿ ಶಾಲೆಗಳ ಶೇ.25 ರಷ್ಟು ಆರ್.ಟಿ ಮಕ್ಕಳ ದಾಖಲಾತಿ ಮರು ಅನುಷ್ಠಾನ ಸೇರಿದಂತೆ ವಿವಿಧ 7 ಬೇಡಿಕೆಗಳನ್ನು ಈಡೇಸುವಂತೆ ಹಕ್ಕೊತ್ತಾಯಿಸಿ ಮಾನ್ಯತೆ ಪಡೆದ ಅನುದಾನ ರಹಿತ ಶಾಲೆಗಳ ಸಂಘ ರುಪ್ಸಾ ಕರ್ನಾಟಕ ದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಹೇಳಿದರು.

## ಗುಡೇಕೋಟೆ ಪೊಲೀಸರ ಭರ್ಜರಿ ಬೇಟೆ 7 ಕೆ.ಜಿ. ತೂಕದ 6 ಗಾಂಜಾ ಗಿಡ ವಶ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಜಮೀನಿನಲ್ಲಿ ಗಾಂಜಾ ಬೆಳೆದಿದ್ದ 07 ಕೆ.ಜಿ ತೂಕದ 06 ಗಾಂಜಾ ಗಿಡಗಳನ್ನು ವಶಪಡಿಸಿಕೊಳ್ಳುವಲ್ಲಿ ಗುಡೇಕೋಟೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೂಡ್ಲಿಗಿ ತಾಲೂಕಿನ ಅರ್ಜುನಚಿನ್ನನಹಳ್ಳಿ ಗ್ರಾಮದಲ್ಲಿ ಪಾಪಯ್ಯ ಎಂಬ ವ್ಯಕ್ತಿ ಅಕ್ರಮವಾಗಿ ಅವರ ಜಾಮೀನಿನ ಮೆಣಸಿನಕಾಯಿ ಗಿಡಗಳಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ವಿಜಯನಗರ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಕೂಡ್ಲಿಗಿ ಉಪವಿಭಾಗದ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ಸಿಪಿಐ ಸುರೇಶ್ ತಳವಾರ್ ಅವರ ಮಾರ್ಗದರ್ಶನದ ನೇತೃತ್ವದ ಗುಡೇಕೋಟೆ ಪೋಲೀಸ್ ಠಾಣೆಯ ಪಿಎಸ್ಐ ಪ್ರಕಾಶ್ ಸಿ, ಇವರ ತಂಡ ದಾಳಿ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

**ಮೆಣಸಿನಕಾಯಿ ಗಿಡಗಳಲ್ಲಿ ಗಾಂಜಾ ಬೆಳೆದಿದ್ದರು:** ಆರೋಪಿ ಪಾಪಯ್ಯ ಅವರು ದಾಳಿ ವೇಳೆ ಗಾಂಜಾ ಬೆಳೆಗೆ ಕೈಗೊಂಡಿರುವ ಕ್ರಮಗಳನ್ನು ಕಂಡು ಪೊಲೀಸರೇ ದಿಗ್ಭ್ರಾಂತರಾಗಿದ್ದಾರೆ. ಜಮೀನಿನಲ್ಲಿ ಮೆಣಸಿನಕಾಯಿ ಗಿಡಗಳಲ್ಲಿ ಅಲ್ಲಲ್ಲಿ ಗಾಂಜಾ ಬೆಳೆಯಲಾಗಿತ್ತು. ಈ ಸ್ಥಳದಲ್ಲಿ ಜಮೀನಿನಲ್ಲಿ ಸುಮಾರು 7.50 ಕೆಜಿ 06 ಗಿಡ ಸುಮಾರು 30,000 ಸಾವಿರ ರೂಪಾಯಿಗಳ ಮೌಲ್ಯದ 7 ಗಾಂಜಾ ಗಿಡಗಳನ್ನು ಬೆಳೆಯಲಾಗಿತ್ತು. ಗಿಡಗಳನ್ನು ವಶಪಡಿಸಿಕೊಂಡ ಗುಡೇಕೋಟೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗುಡೇಕೋಟೆ ಪೋಲೀಸ್ ಠಾಣೆಯ ಪಿಎಸ್ಐ ಪ್ರಕಾಶ್ ಸಿ ಮತ್ತು ತಂಡದ ಕಾರ್ಯವೈಖರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ಸಿಪಿಐ ಸುರೇಶ್ ತಳವಾರ್, ಶ್ಲಾಘಿಸಿದ್ದಾರೆ. ದಾಳಿಯಲ್ಲಿ ಗುಡೇಕೋಟೆ ಪೋಲೀಸ್ ಠಾಣೆಯ ಪಿಎಸ್ಐ ಪ್ರಕಾಶ್ ಸಿ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಶ್ರೀಧರಬಾಬು, ಕೆಪಿಎಸ್ ಶಾಲೆ ಪ್ರೌಢಶಾಲೆ ಶಿಕ್ಷಕ ಶಿವನಾಯಕದೊರೆ, ಪೇದೆಗಳಾದ ಗುರುಸ್ವಾಮಿ, ಮಹಾಂತೇಶ್, ತಿರುಮಲ ಸೇರಿದಂತೆ ಇತರರಿದ್ದರು.

## ಮಣ್ಣಲ್ಲಿ ಮಣ್ಣಾದ ಮಹಾನಟಿ ಲೀಲಾವತಿ

**ಹಂಪಿ ಟೈಮ್ಸ್ ಹೊಸಪೇಟೆ**

ಸ್ವಾಭಿಮಾನದ ನಲ್ಲೆ, ಭಾಗ್ಯದ ದೇವತೆ, ಚಂದನವನದ ಚೆಲುವೆ, ಕನ್ನಡದ ಮಹಾನಟಿ ಲೀಲಾವತಿ ಬಾರದ ಲೋಕಕ್ಕೆ ತೆರಳಿದ್ದಾರೆ. ಕಲಾದೇವಿಗೆ ಇಡೀ ಸ್ಯಾಂಡಲ್‌ವುಡ್ ಕಣ್ಣೀರ ವಿದಾಯ ಹೇಳಿದೆ. ಸೋಲದೇವನ ಹಳ್ಳಿಯಲ್ಲಿರುವ ತೋಟದಲ್ಲಿ ಲೀಲಾವತಿ ಅವರ ಅಂತ್ಯಕ್ರಿಯೆ ಶನಿವಾರ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು. ದಕ್ಷಿಣ ಕನ್ನಡ ಬೆಳ್ತಂಗಡಿ ಮೂಲದವರಾದ ನಟಿ ಲೀಲಾವತಿ ಅವರ ಅಂತ್ಯ ಸಂಸ್ಕಾರ ಬಂಟರ ಸಂಪ್ರದಾಯದಂತೆ ನಡೆಯಿತು. ಮಗ ವಿನೋದ್ ರಾಜ್ ಅವರು ಅಂತಿಮ ವಿಧಿವಿಧಾನವನ್ನು ನೆರವೇರಿಸಿದ್ರು.

**ಮಣ್ಣಲ್ಲಿ ಮಣ್ಣಾದ ಮಣ್ಣಿನ ಮಗಳು ಲೀಲಾವತಿ:** ರವೀಂದ್ರಕಲಾಕ್ಷೇತ್ರದಲ್ಲಿ ಬೆಳ್ಳಗೆಯಿಂದ ಮಧ್ಯಾಹ್ನದವರೆಗೆ ಅನೇಕ ಗಣ್ಯರು ಹಾಗೂ ಅಭಿಮಾನಿಗಳು ಲೀಲಾವತಿ ಅಂತಿಮ ದರ್ಶನ ಪಡೆದ್ರು. ಬಳಿಕ ನೇರವಾಗಿ ಲೀಲಾವತಿ ನಿವಾಸಕ್ಕೆ ಪಾರ್ಥಿವ ಶರೀರ ಕರೆತರಲಾಯ್ತು. ಸೋಲದೇವನ ಹಳ್ಳಿಯಲ್ಲಿರುವ ನಿವಾಸದಲ್ಲಿ ಅಂತಿಮ ಪೂಜೆಗಳು ನಡೆಯಿತು. ಪೂಜೆ ಬಳಿಕ ಹೂವಿನ ಪಲ್ಲಕ್ಕಿ ಚಟ್ಟದಲ್ಲಿ ಅಂತ್ಯಕ್ರಿಯೆ ಸ್ಥಳಕ್ಕೆ ಪಾರ್ಥಿವ ಶರೀರ ತರಲಾಯ್ತು. ನಿವಾಸದಿಂದ 500 ಮೀಟರ್ ದೂರದಲ್ಲಿ ವಿನೋದ್ ರಾಜ್ ಗುರುತು ಮಾಡಿರುವ ಜಾಗದಲ್ಲೇ ಅಮ್ಮ ಲೀಲಾವತಿ ಅಂತ್ಯಕ್ರಿಯೆ ನಡೆಯಿತು. ಮೂರು ಬಾರಿ ಕುಶಾಲತೋಪು ಸಿಡಿಸಿ ಗೌರವ ವಂದನೆ ಸಲ್ಲಿಸಿದ್ರು. ಸಕಲ ಸರ್ಕಾರಿ ಗೌರವಗಳೊಂದಿಗೆ ಲೀಲಾವತಿ ಅಂತ್ಯ ಸಂಸ್ಕಾರ ನೆರವೇರಿತು.

**ಸೋಲದೇವನಹಳ್ಳಿಯ ದೇವತೆ:** ನಟಿ ಲೀಲಾವತಿ ಅವರ ಪಾರ್ಥಿವ ಶರೀರ ಕಂಡು ಸೋಲದೇವನಹಳ್ಳಿ ಜನ್ರು ಕಣ್ಣೀರು ಹಾಕಿದ್ದರು. ಅವ್ರು ಬಂದ್ಮೇಲೆ ನಮ್ ಊರಿಗೆ ರಸ್ತೆ ಬಂತು, ಆಸ್ಪತ್ರೆ ಕೂಡ ಬಂತು. ಅಮ್ಮ ಮಗನ ಗುಣ ಒಳ್ಳೆಯದ್ದು. ಅವ್ರು ಜನ್ರ ಪರವಾಗಿ ಕೆಲಸ ಮಾಡಿದ್ದಾರೆ. ಪ್ರಾಣಿ ಪಕ್ಷಿಗಳ ರೈತರ ಮೇಲೆ ಕಾಳಜಿ ಹೊಂದಿದ್ರು. ಅವ್ರು ಬಂದ್ಮೇಲೆ ನಮ್ಗೆ ಬಸ್ ವ್ಯವಸ್ಥೆ ಆಗಿದೆ. ಆಸ್ಪತ್ರೆ ಕಟ್ಟಿಸಿ ಜನ್ರ ಜೀವಕ್ಕೆ ಉಸಿರಾಗಿದ್ದರು ಎಂದು ಜನರು ಲೀಲಾವತಿಯನ್ನು ಕೊಂಡಾಡಿದ್ರು.



ನನ್ನ ವಿದ್ಯಾರ್ಥಿ ಜೀವನದಲ್ಲಿ ಲೀಲಾವತಿಯವರ ಚಲನಚಿತ್ರಗಳನ್ನು ನೋಡಿಕೊಂಡು ಬೆಳೆದವನು. ತನಗೆ ವಹಿಸುವ ಪ್ರತಿ ಪಾತ್ರಕ್ಕೂ ಜೀವತುಂಬುತ್ತಿದ್ದ ಓರ್ವ ಪರಿಪೂರ್ಣ ಕಲಾವಿದೆ. ಇಂದಿಗೂ ಅವರ ನಟನೆ ನನ್ನ ಕಣ್ಣೆದುರೇ ಇದ್ದಂತಿದೆ. ನಟನೆಯ ಜೊತೆಗೆ ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು. ತಾವು ಗಳಿಸಿದ ಹಣದಲ್ಲಿ ನೂರಾರು ಜೀವಗಳಿಗೆ ನೆರವಾದ ಹೃದಯವಂತೆ. ದಯೆಯೇ ಧರ್ಮದ ಮೂಲವಯ್ಯ ಎಂಬ ಮಾತನ್ನು ತಮ್ಮ ಬದುಕಿನಲ್ಲಿ ಯಥಾವತ್ತು ಅಳವಡಿಸಿಕೊಂಡಿದ್ದ ಲೀಲಾವತಿ ಅವರ ನಿಧನದಿಂದ ನನಗೆ ಅತೀವ ನೋವಾಗಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ವಿನೋದ್ ರಾಜ್ ಅವರಿಗೆ ದುಃಖ ಭರಿಸುವ ಶಕ್ತಿ ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

**– ಸಿದ್ದರಾಮಯ್ಯ, ಮುಖ್ಯಮಂತ್ರಿ**

ಲೀಲಾವತಿಯವರ ಕಲಾಸೇವೆ ಹಾಗೂ ಸಾಮಾಜಿಕ ಕಳಕಳಿ ನಮ್ಮೆಲ್ಲರಿಗೂ ಮಾದರಿಯಾಗಿದ್ದು, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

**– ಡಿ.ಕೆ.ಶಿವಕುಮಾರ, ಉಪ ಮುಖ್ಯಮಂತ್ರಿ**

## ಶ್ರೀವಿಠ್ಠಲ–ರುಕ್ಮಿಣಿ ದೇವರ 31ನೇ ವರ್ಷದ ದಿಂಡಿ ಉತ್ಸವ

**ಹಂಪಿ ಟೈಮ್ಸ್ ಕೊಟ್ಟೂರು**

ವಿಜಯನಗರ ಜಿಲ್ಲೆ ಕೊಟ್ಟೂರು ಪಟ್ಟಣದ ಶ್ರೀವಿಠ್ಠಲ–ರುಕ್ಮಿಣಿ ದೇವರ 31ನೇ ವರ್ಷದ ದಿಂಡಿ ಉತ್ಸವ ಡಿಸೆಂಬರ್– 13 ರಿಂದ ಮೂರು ದಿನ ಸಂಭ್ರಮದಲ್ಲಿ ವಿಜೃಂಭಣೆಯಿಂದ ಜರುಗಲಿದ್ದು ಶ್ರೀ ಸ್ವಾಮಿಯ ಸದ್ ಭಕ್ತರು ಉತ್ಸವದಲ್ಲಿ ತನು, ಮನಗಳಿಂದ ಪಾಲ್ಗೊಂಡು ಶ್ರೀವಿಠ್ಠಲ–ರುಕ್ಮಿಣಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಭಾವಸಾರ ಕ್ಷತ್ರಿಯ ಸಮಾಜದ, ಶ್ರೀ ಪಾಂಡುರಂಗ ರುಕ್ಮಿಣಿ ಟ್ರಸ್ಟ್ ಪ್ರಕಟಣೆಯಲ್ಲಿ ಕೋರಿದ್ದಾರೆ. ಡಿ–13 ರಂದು ಬುಧವಾರ ಶ್ರೀಗೋಪಾಲ್ ಮಹಾರಾಜರು ಅಣ್ಣಾ ಸಾಹೇಬ್ ಬಾಹು ಸಾಹೇಬ್ ವಾಸ್ಕರ ಮಹಾರಾಜ ಪಂಢರಪುರ ಇವರ ದಿವ್ಯ ಕೃಪಾಶಿರ್ವಾದದೊಂದಿಗೆ ಸಂಜೆ ಪೋತಿಸ್ಥಾಪನೆ,ಭಜನೆ ಹಾಗೂ ರಾತ್ರಿ ಕೀರ್ತನೆ ನಂತರ ಅಖಂಡ ವೀಣಾ ಜಾಗರಣೆ ನಡೆಯಲಿವೆ. ಡಿ–14 ರಂದು ಗುರುವಾರ ಬೆಳಿಗ್ಗೆ ಕಾಕಡಾರುತಿ,ಭಜನೆ, ಪಾರಾಯಣ ಮತ್ತು 9–12 ನೇ ಅಧ್ಯಾಯ ಜ್ಞಾನೇಶ್ವರಿ ಪಾರಾಯಣ, ಸಂಜೆ ನಾಮಜಪ,ಪ್ರವಚನ ಹಾಗೂ ರಾತ್ರಿ ಕೀರ್ತನೆ ಜರುಗಲಿವೆ.

ಡಿ.15 ಶುಕ್ರವಾರ ಬೆಳಿಗ್ಗೆ ಕಾಕಡಾರತಿ,ಕಾಲಕೀರ್ತನ ನಡೆದ ನಂತರ ಮಧ್ಯಾಹ್ನ ಶ್ರೀ ವಿಠ್ಠಲ–ರುಕ್ಮಿಣಿ ದೇವರ ಉತ್ಸವ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶ್ರೀದೇವರ ನಾಮ ಸ್ಮರಣೆಯ ಭಜನೆಯೊಂದಿಗೆ ಮತ್ತು ಮಹಿಳೆಯರು ಕಂಚಿ ಕಳಸದೊಂದಿಗೆ ಪಾಲ್ಗೊಳ್ಳಲಿದ್ದು, ಉತ್ಸವ ನೂರಾರು ಭಕ್ತರ ಸಮೂಹದಲ್ಲಿ ಅದ್ದೂರಿಯಾಗಿ ನಡೆಯಲಿದೆ ಎಂದು ತಿಳಿಸಿರುವರು.

## ಖಾದಿರ್ ಲಿಂಗ್ ಸಾಹೆಬ್ ಎನ್‌ಎಸ್ ಬೋಸರಾಜು ಭೇಟಿ

**ಹಂಪಿ ಟೈಮ್ಸ್ ರಾಯಚೂರು,**

ಆಂದ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕೌತಾಳಂನ ಹೊಸ ಮದರ್ಸಾ –ಇ–ಸಾನಿ ಖಾದಿರ್ ಲಿಂಗ್ ಬ್ಯಾಂಡ್ (ಆರ್.ಎ) ಮತ್ತು ಮಸೀದಿ–ಇ–ಖಾದಿರ್ ಲಿಂಗನ್ ಜಗತ್ಗುರು ಪೀಠಾಧಿಪತಿಗಳಾದ ಮುನ್ನಾ ಸಾಹೆಬ್ ಅವರನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವರಾದ ಎನ್‌ಎಸ್ ಬೋಸರಾಜು ಅವರು ಭೇಟಿ ಮಾಡಿ ಸಾಹೆಬ್ ಅವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಸಾಹೆಬ್ ಅವರು ಸಚಿವರಿಗೆ ಹಾಗೂ ಮಾನ್ವಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಹಂಪಯ್ಯ ನಾಯಕ್ ಅವರಿಗೆ ಸನ್ಮಾನಿಸಿ ಆಶೀರ್ವದಿಸಿದರು. ಹಿರಿಯರಾದ ಕೆ ಶಾಂತಪ್ಪ, ರುದ್ರಪ್ಪ ಅಂಗಡಿ, ಅದಮ್ ಬೇಗ್, ಉಸ್ಮಾನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA